ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈಗ ಸಭೆಯನ್ನು ಮೂರೂವರೆ ಗಂಟೆಗೆ ಸೇರುವಂತೆ....

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಮಹಾಜನ್ ವರದಿ ಅಂತಿಮ ಎಂಬ ಬಗ್ಗೆ ನಿರ್ಣಯ ಮಂಡಿಸುವ ಬಗ್ಗೆ ಹಾಗೂ ಹಕ್ಕುಚ್ಯುತಿ ನಿರ್ಣಯದ ಬಗ್ಗೆ.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಪ್ರಿವಿಲೇಜ್ ಮೋಷನ್ ತಂದಿದ್ದೇವೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ತಾವು ಮೊದಲು ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಶ್ರೀ ಎನ್. ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಈ ಅಧಿವೇಶನ ನಡೆಯುತ್ತಿದೆ. ಇದು ತನ್ನದೇ ರೀತಿಯಲ್ಲಿ ಬಹಳ ಪ್ರಾಮುಖ್ಯತೆ ಆಗಿದೆ. ಇವತ್ತು ನಾವು ಯಾರ ಮೇಲೆ ಆರೋಪ ಮಾಡುವ ರೀತಿಯಲ್ಲಿಲ್ಲ. ಇವೊತ್ತು ಈಗಾಗಲೇ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಮಹಾಮೇಳ ನಡೆಯುತ್ತಿದೆ. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಗಳು ಸದರಿ ಮಹಾಮೇಳಕ್ಕೆ ಬಂದು ಉದ್ದೇಶಿಸಿ ಭಾಷಣ ಮಾತನಾಡುತ್ತಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ತಮಗೆ ಗೊತ್ತಿರಬಹುದು, ಬೆಳಗಾವಿ Corporation ನಲ್ಲಿ ಒಂದು ನಿರ್ಣಯವಾಗಿದೆ. ಈ ನಮ್ಮ Belgaum ನಗರ ಹಾಗೂ ಜಿಲ್ಲೆ ಮಹಾರಾಷ್ಟ್ರಕ್ಕೆ ಸೇರಬೇಕೆಂದು ನಿರ್ಣಯ ಮಾಡಿದ್ದಾರೆ. ಇವತ್ತು ಎಲ್ಲಿ ಗಡಿ ಭಾಗದಲ್ಲಿ ಬೆಳಗಾಂನಲ್ಲಿ ಸೇರತಕ್ಕಂಥ ಈ ಅಧಿವೇಶನದಲ್ಲಿ ಈಗಾಗಲೇ 1–2 ಸಲ ನಾವೂ ಮಾಡಿದ್ದೇವೆ. ಆದರೂ ಕೂಡ ಮಹಾರಾಷ್ಟ್ರ ಸರ್ಕಾರದವರು ಇದಕ್ಕೆ ಹೆಚ್ಚಿನ ಕಿರುಕುಳ ಕೊಡುತ್ತಿದ್ದಾರೆ. ಎಲ್ಲರೂ ಒಂದಾಗಿ ಪ್ರಧಾನ ಮಂತ್ರಿಗಳ ಬಳಿಗೆ ಹೋಗಿದ್ದಾರೆ. ಒಂದು affidavit ದಾಖಲು ಮಾಡಿದ್ದಾರೆ. ಮತ್ತೊಂದು affidavit ಹಾಕತಕ್ಕಂಥ ರೀತಿಯಲ್ಲಿ ಆಗುತ್ತಿದೆ. ಇಂಥ ಒಂದು ಸಂದರ್ಭದಲ್ಲಿ ಈ ದಿನ ನಾನು ಸಭಾನಾಯಕರಿಗೆ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಮಹಾಜನ

ವರದಿಯೇ ಅಂತಿಮ ಎನ್ನತಕ್ಕಂಥ resolution ಅನ್ನು ನಾವು move ಮಾಡುತ್ತಿದ್ದೇವೆ. ಆ ನಿರ್ಣಯಕ್ಕೆ ಅಂಗೀಕಾರ ಮಾಡಬೇಕು. ಇದನ್ನು ನಾನು ಓದಿ ಹೇಳುತ್ತಿದ್ದೇನೆ. ಗಡಿ ವಿವಾದದ ಕುರಿತು ಈ ಕೆಳಕಂಡ ನಿರ್ಣಯವನ್ನು ದಿ.25.09.06ರಂದು ಅಂದರೆ, ಇವತ್ತು ಸದನದಲ್ಲಿ ಮಂಡಿಸಲು ಅನುಮತಿ ನೀಡುವಂತೆ ತಮ್ಮಲ್ಲಿ ವಿನಂತಿಸುತ್ತೇನೆ:

ಅಂತರರಾಜ್ಯ ಗಡಿ ವಿವಾದದಂತಹ ಅತ್ಯಂತ ಗಂಭೀರವಾದ ಮತ್ತು ದೂರಗಾಮಿ ಪರಿಣಾಮ ಹೊಂದಿರುವ.....

ಶ್ರೀ ವಾಟಾಳ್ ನಾಗರಾಜ್: ಆ ನಿರ್ಣಯವನ್ನು ಎಲ್ಲರೂ ಸೇರಿ ಮಾಡೋಣ.

ಶ್ರೀ ಎನ್. ಧರ್ಮಸಿಂಗ್: ಈ ನಿರ್ಣಯವನ್ನು ನಾವು ಮಂಡಿಸುತ್ತೇವೆ. ಅನಂತರ ತಾವು ಒಪ್ಪಿ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ, ಹಕ್ಕುಚ್ಯುತಿ ನಿರ್ಣಯ.....

ಶ್ರೀ ಎನ್. ಧರ್ಮಸಿಂಗ್: ಕರ್ನಾಟಕ ರಾಜ್ಯವು ಇಲ್ಲಿಯವರೆಗೆ ವಿವೇಕಯುತವಾದ ನೀತಿಯನ್ನು ಅನುಸರಿಸಿಕೊಂಡು ಬಂದು ರಾಜ್ಯದ ಹಿತವನ್ನು ರಕ್ಷಣೆ ಮಾಡುವಲ್ಲಿ.....

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ನಾವು ಆ ನಿರ್ಣಯದ ವಿರುದ್ಧವಿಲ್ಲ, ಪರವಾಗಿದ್ದೇವೆ. ಆದರೆ, ನಾವು ಒಂದು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿರುವಾಗ ಬೇರೆ ಯಾವುದೇ ಪ್ರಸ್ತಾವವನ್ನು ತೆಗೆದುಕೊಳ್ಳಲು ಬರುವುದಿಲ್ಲ.

(ಅಡಚಣೆ)

ಅಧ್ಯಕ್ಷರು: ಹೀಗೆ ಮಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ತರಹ ನಿರ್ಣಯ ಮಂಡನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಆ ತರಹ ಆಗುವುದಿಲ್ಲ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಮಹಾಜನ ವರದಿ ಅನುಷ್ಠಾನವಾಗಬೇಕು.

(ಅಡಚಣೆ)

ಶ್ರೀ ಎನ್.ಧರ್ಮಸಿಂಗ್: ಮಹಾರಾಷ್ಟ್ರ ಗಡಿ ವಿವಾದವನ್ನು ಪರಿಹರಿಸಲು.....

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಿರ್ಣಯ ಮಂಡನೆ ಮಾಡಲಿಕ್ಕೆ ಆಗುವುದಿಲ್ಲ.

(ಅಡಚಣೆ)

ಶ್ರೀ ಎನ್.ಧರ್ಮಸಿಂಗ್: ..... ಆ ವರದಿಯನ್ನು ಜಾರಿಗೊಳಿಸಲು ....

ಶ್ರೀ ವಾಟಾಳ್ ನಾಗರಾಜ್: ಹಕ್ಕುಚ್ಯುತಿ ನಿರ್ಣಯವಿರುವಾಗ, ಈ ನಿರ್ಣಯ ಮಾಡಲಿಕ್ಕಾಗುವುದಿಲ್ಲ.

ಅಧ್ಯಕ್ಷರು: ದಯಮಾಡಿ ಕೇಳಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಹಕ್ಕುಚ್ಯುತಿ ನಿರ್ಣಯ ಇರುವಾಗ ನಿರ್ಣಯ ಮಂಡನೆ ಮಾಡುವುದಕ್ಕಾಗುವುದಿಲ್ಲ. ಆ ನಿರ್ಣಯಕ್ಕೂ ನಮಗೂ ಸಂಬಂಧವಿಲ್ಲ. ಆ ನಿರ್ಣಯವನ್ನು ಹಕ್ಕುಚ್ಯುತಿ ಇರುವಾಗ ಮಂಡನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಾವು ನಿರ್ಣಯಕ್ಕೆ ವಿರೋಧ ಮಾಡಿಲ್ಲ.

(ಅಡಚಣೆ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಎಲ್ಲರಲ್ಲೂ ನನ್ನ ವಿನಂತಿ. ನನಗೆ ವಿರೋಧ ಪಕ್ಷದ ನಾಯಕರು ಒಂದು ನಿರ್ಣಯವನ್ನು ಕಳುಹಿಸಿಕೊಟ್ಟಿದ್ದಾರೆ. ನಾನು ಅದನ್ನು ಪರಿಶೀಲಿಸುತ್ತಿದ್ದೇನೆ. ಪರಿಶೀಲನೆ ಮಾಡಿ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಿರ್ಣಯಕ್ಕೆ ಬೆಂಬಲ ಕೊಡುತ್ತಿದ್ದೇವೆ. ತಪ್ಪೇನಿಲ್ಲ.

ಅಧ್ಯಕ್ಷರು: ಕಳುಹಿಸಿದ್ದಾರೆ. ಅದನ್ನು ನಾನು ಪರಿಶೀಲಿಸುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದಕ್ಕೆ ನಾವೆಲ್ಲರೂ ಕೂಡ ಬೆಂಬಲ ಸೂಚಿಸುತ್ತಿದ್ದೇವೆ. ಇಡೀ ಸದನ ಈ ನಿರ್ಣಯಕ್ಕೆ ಬೆಂಬಲ ಸೂಚಿಸಲಿ.

ಅಧ್ಯಕ್ಷರು: ಅದಕ್ಕೋಸ್ಕರ ಏನೆಂದರೆ, ಅವರು ಅವರದೇ ಆದ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆ ನಿರ್ಣಯವನ್ನು ಎಲ್ಲರೂ ಸೇರಿ ಅಂಗೀಕರಿಸಬಹುದು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಿರ್ಣಯ ಮಂಡನೆ ಮಾಡಲಿಕ್ಕೆ ಬರುವುದಿಲ್ಲ. ಅವರು ಹಕ್ಕುಚ್ಯುತಿ ನಿರ್ಣಯಕ್ಕೆ ಸಹಿ ಮಾಡಿದ್ದಾರೆ.

(ಅಡಚಣೆ)

ನಿರ್ಣಯ ಮಂಡಿಸಿದರೆ ಹೇಗೆ?

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ನನಗೆ ಕಳುಹಿಸಿಕೊಟ್ಟಿದ್ದಾರೆ. ಇಲ್ಲಿ ಅವರೇನು ನನಗೆ ಕಳುಹಿಸಿಕೊಟ್ಟಿದ್ದಾರೆ, ಅನ್ನುವುದನ್ನು ನನಗೆ ಓದಿ ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಕ್ಕುಚ್ಯುತಿ ನಿರ್ಣಯಕ್ಕೆ ಅವರೂ ಸಹಿ ಮಾಡಿದ್ದಾರೆ, ಈ ನಿರ್ಣಯ ಮಂಡನೆ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರೂ ಹಕ್ಕುಚ್ಯುತಿ ನಿರ್ಣಯಕ್ಕೆ ಸಹಿ ಮಾಡಿದ್ದಾರೆ….

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಚರ್ಚೆಯಾಗದೇ ಮಂಡನೆ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಆಮೇಲೆ ನಿರ್ಣಯ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ನಾವು ನಿರ್ಣಯಕ್ಕೇನೂ ವಿರೋಧ ಮಾಡುತ್ತಿಲ್ಲ. ಮಹಾಜನ ವರದಿಗೆ ಸರ್ಕಾರ ನಿರ್ಣಯವನ್ನು ಬೇಕಾದರೆ ಮಂಡಿಸಲಿ. ಸರ್ವಾನುಮತದಿಂದ ನಿರ್ಣಯ ಆಗಲಿ.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ: ಹಕ್ಕುಚ್ಯುತಿ ನಿರ್ಣಯ ಮಂಡನೆ ಮೊದಲು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್: ಮೊದಲು ಹಕ್ಕುಚ್ಯುತಿ ನಿರ್ಣಯ ತೆಗೆದುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ: ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ resolution move ಮಾಡಿದ್ದಾರೆ. ಇಡೀ ಸದನ ಒಪ್ಪಬೇಕು.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ನಾವು ನಿರ್ಣಯಕ್ಕೆ ವಿರೋಧವೇನೂ ಇಲ್ಲ. ಮಹಾಜನ ವರದಿ ಕಾರ್ಯಗತವಾಗಬೇಕೆಂದು ಸರ್ವಾನುಮತದಿಂದ ನಿರ್ಣಯ ಮಾಡಿ. ಹಕ್ಕುಚ್ಯುತಿ ನಿರ್ಣಯವನ್ನು ಮೊದಲು ತೆಗೆದುಕೊಳ್ಳಬೇಕು.

(ಅಚಡಣೆ)

ಶ್ರೀ ಆರ್.ವಿ. ದೇಶಪಾಂಡೆ: ಇವತ್ತು ಸರ್ಕಾರದಿಂದ resolution move ಮಾಡಬೇಕಾಗಿತ್ತು. ಬೆಳಗಾವಿಯಲ್ಲಿ ಅಧಿವೇಶನ ಮಾಡುತ್ತಾರೆ. ಸರ್ಕಾರದಿಂದ resolution ಮೂವ್ ಆಗಬೇಕಾಗಿತ್ತು. ಸರ್ಕಾರ ಚ್ಯುತಿ ಮಾಡಿದೆ. ಹಾಗಾಗಿ ನಾವೇ resolution move ಮಾಡಿದ್ದೇವೆ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬೇರೆ ನಿರ್ಣಯ ಮಂಡನೆ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇಡೀ ಸಭೆಯನ್ನು ದಾರಿ ತಪ್ಪಿಸಲಿಕ್ಕೆ ಆಗುವುದಿಲ್ಲ. ಸಭೆ ನಿಯಮ ದಾರಿಯಲ್ಲಿ ನಡೆಯಬೇಕು. ನಿಯಮ ಬಾಹಿರವಾಗಿ ನಡೆಯುವುದಕ್ಕಾಗುವುದಿಲ್ಲ. ಹಕ್ಕುಚ್ಯುತಿ ನಿರ್ಣಯವನ್ನು ಮೊದಲು ತೆಗೆದುಕೊಳ್ಳಬೇಕು. ನಿರ್ಣಯವಾಗುವುದು ಪಕ್ಷದ ನಿರ್ಣಯ ಅಲ್ಲ. ಅದು ಸಮಗ್ರ ಶಾಸನ ಸಭೆಯಲ್ಲಿ ನಿರ್ಣಯವಾಗಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಕ್ಕುಚ್ಯುತಿ ನಿರ್ಣಯ ಕೊಟ್ಟಿದ್ದೇವೆ. ಅದು ಚರ್ಚೆಯಾಗದೇ ಬೇರೆ ಯಾವುದೂ ನಿರ್ಣಯ ಮಂಡನೆ ಮಾಡುವುದಕ್ಕಾಗುವುದಿಲ್ಲ. ಅವರೂ ಅದಕ್ಕೆ ಸೈನ್ ಮಾಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಸಂಸದೀಯ ಇಲಾಖೆಯ ಮಂತ್ರಿ ನಾನು. ಇದರ ಬಗ್ಗೆ ಆಕ್ಷೇಪಣೆ ಇದೆ...

ಅಧ್ಯಕ್ಷರು: ಪ್ರಕಾಶ್‌ರವರೆ, ನಾನು ಹೇಗಿದ್ದರೂ ಕಾರ್ಯಕಲಾಪ ಸಮಿತಿ ಸಭೆ ಕರೆದಿದ್ದೇನೆ. ಇದು ಬಹಳ ಗಂಭೀರವಾದ ವಿಚಾರ. ಅದರ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಸರ್ವಸಮ್ಮತದಿಂದ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಎಂ.ಪಿ. ಪ್ರಕಾಶ್(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ಅಂತಿಮವಾಗಿ ಯಾವ ನಿರ್ಣಯವನ್ನು ಕೊಟ್ಟರೂ ಕೂಡ ನಾವು ಒಪ್ಪಿಕೊಳ್ಳುತ್ತೇವೆ. ನಾವೇ ರಚನೆ ಮಾಡಿದಂಥ ನಡವಳಿಕೆ, ನಿಯಮಗಳಿವೆ. 146ರ ಕೆಳಗೆ ನಿರ್ಣಯದ ಸೂಚನೆ ಕೊಡುವುದು. ಒಂದು ನಿರ್ಣಯವನ್ನು ಮಂಡಿಸಲು ಇಷ್ಟಪಟ್ಟಿರುವ ಮಂತ್ರಿಗಳಲ್ಲದ ಒಬ್ಬರು ಬ್ಯಾಲೆಟ್ ದಿನಾಂಕಕ್ಕೆ ಕನಿಷ್ಠ ಪಕ್ಷ 7 ದಿನಗಳ ಮುಂಚೆ ತಮ್ಮ ಉದ್ದೇಶಗಳನ್ನು ಕುರಿತು ಸೂಚನೆ ಕಳುಹಿಸಬೇಕು..

(ಅಡಚಣೆ)

ಇದರ ಜೊತೆಗೆ, ಹಿಂದೆ ಮಹಾಜನ್ ಆಯೋಗದ ವಿಚಾರದಲ್ಲಿ ಸಭೆ ಈಗಾಗಲೇ ನಿರ್ಣಯ ಕೈಗೊಂಡಿದೆ. ಒಮ್ಮೆ ನಾವು ನಿರ್ಣಯ ಕೈಗೊಂಡಾಗ ಮತ್ತೊಮ್ಮೆ ನಿರ್ಣಯವನ್ನು ತೆಗೆದುಕೊಳ್ಳಬಾರದು ಎಂದು ಏನೂ ಇಲ್ಲ. ಅನೇಕ ಬಾರಿ ನಮ್ಮದೇ ಆದ ಅಭಿಪ್ರಾಯಗಳನ್ನು ಪುನರಪಿ ಮಾಡಿ reiterating ಎಂದು ಕರೆಯುತ್ತಾರೆ, ಆ ತರಹ ಮಾಡಲಿಕ್ಕೆ ನಮಗೆ ಅಧಿಕಾರವಿದೆ. ಅದೂ ಕೂಡ ಇಲ್ಲಿ ಖಾಸಗಿ ನಿರ್ಣಯದಂತೆ ಬಂದಿದೆ. ತಾವು ಅದಕ್ಕೆ ಆಕ್ಷೇಪಣೆ ಮಾಡಿ. ತಾವೆಲ್ಲರೂ ಕೂಡ ಶಾಂತಿ ರೀತಿಯಿಂದ ಕಲಿತರೆ ನಿಮ್ಮ ಅನುಭವದಿಂದ ನಾನೂ ಕಲಿಯುವುದಕ್ಕೆ ಸಾಧ್ಯವಾಗುತ್ತದೆ. ಬೇರೆಯವರೂ ಕಲಿಯಲಿಕ್ಕೆ ಸಾಧ್ಯತೆ ಆಗುತ್ತದೆ. ಇದೊಂದು ಖಾಸಗಿ ನಿರ್ಣಯದ ರೀತಿಯಲ್ಲಿ ಅವರು ಮಂಡಿಸಿರುವುದು ಒಂದು ಸೆಕ್ಷನ್ 146ರ ಕೆಳಗೆ ಆಕ್ಷೇಪಣೆ. ಎರಡನೆಯದಾಗಿ, ಪ್ರತಿ ಶುಕ್ರವಾರ ಖಾಸಗಿ ನಿರ್ಣಯಗಳನ್ನು ಮತ್ತು ಸರ್ಕಾರಿ ಕಲಾಪಗಳೆಂದು ಅಧಿಸೂಚನೆಯನ್ನು ತಮ್ಮ ಕಾರ್ಯಾಲಯದಿಂದ ಹೊರಡಿಸಿದ್ದೀರಿ. ಆದುದರಿಂದ, ಶುಕ್ರವಾರ ದಿವಸ ಈ ಸೂಚನೆಯನ್ನು ಮಂಡಿಸಬಹುದು ಅಥವಾ ಒಂದು ವೇಳೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಗಾವಿಯಲ್ಲಿ ನಡೆಯುವಂಥ ಮಹತ್ವದ ಐಸಿಹಾಸಿಕ ಅಧಿವೇಶನದಲ್ಲಿ ಸರ್ವಸಮ್ಮತವಾಗಿರುವ ಒಂದು ಗೊತ್ತುವಳಿ ಆಗಬೇಕು ಅನ್ನವುದಾಗಿದ್ದರೆ, ಅದಕ್ಕೆ ಖಂಡಿತವಾಗಿಯೂ ಕೂಡ ನನ್ನ ಯಾವ ಆಕ್ಷೇಪಣೆಯೂ ಇಲ್ಲ. ಆದರೆ, ಇವತ್ತು ಕಾರ್ಯಕಲಾಪಗಳ ಸಭೆ 3 ಗಂಟೆಗೆ ಇದೆ. ತಾವು ತೀರ್ಮಾನ ಮಾಡಿದಂತೆ ಈಗಾಗಲೇ ನಮಗೆ ಮನವರಿಕೆ ಮಾಡಿಕೊಟ್ಟಂತೆ ಕಾರ್ಯಕಲಾಪಗಳ ಸಭೆಯಲ್ಲಿ ಅದಕ್ಕಾಗಿ ತಾರೀಖಿನ್ನು, ಅದಕ್ಕೆ ಬೇಕಾಗಿರುವ ಸಮಯವನ್ನು, ಯಾರು ಮಾತನಾಡ ಬೇಕೆಂಬ ವಿಚಾರವನ್ನು ಮಾಡಿದರೆ, ಅದು ಸಾಧಾರಣವಾಗಿ ಸರ್ಕಾರದಿಂದ ಮಂಡಿಸಲ್ಪಟ್ಟು, ಸಭಾನಾಯಕರಿಂದ ಮಂಡಿಸಲ್ಪಟ್ಟರೆ ಅದಕ್ಕೆ ಬಹಳ ಘನತೆ ಬರುತ್ತದೆ. ಆ ಕಾರಣಕ್ಕೆ ವಿರೋಧ ಪಕ್ಷದ ನಾಯಕರು ಒಪ್ಪಿದರೆ, ನಾವು ಸರ್ಕಾರದಿಂದಲೂ ಕೂಡ ಅಂಥ ಒಂದು ಮನವಿಯನ್ನು ನಮ್ಮ ಸಭಾನಾಯಕರು ಮಂಡಿಸಲಿಕ್ಕೆ ತಯಾರಾಗಿದ್ದಾರೆ. ನಾನು ಹೇಳಿದ್ದೇನೆ.

ಶ್ರೀ ಎನ್.ಧರ್ಮಸಿಂಗ್: ಈಗ ನಿಮಗೆ ಅರಿವಾಗಿದೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ದೇಶಪಾಂಡೆಯವರೆ, 6 ಸಲ ಗೆದ್ದು ಬಂದಿದ್ದೇನೆಂದು ಹೇಳುತ್ತೀರಿ. ಹಿಂದೆ ನಾವು ಮಾಡಿರುವುದು ತಮಗೆ ಗೊತ್ತಿದೆ. ಮಾಡಿದ್ದೇವೆ.

ಅಧ್ಯಕ್ಷರು: ಹೀಗಾದರೆ ಹೇಗೆ? ಹೀಗೆಲ್ಲಾ ನಿಂತುಕೊಂಡರೆ ಹೇಗೆ?

ಶ್ರೀ ಎನ್. ಧರ್ಮಸಿಂಗ್: ಸಭಾಧ್ಯಕ್ಷರು ಅಧಿವೇಶನವನ್ನು ಕರೆದಿದ್ದಾರೆ. ಅಧಿವೇಶನ ಕರೆಯುವ ಮುಂಚೆ ಈ ಸರ್ಕಾರ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ.

(ಅಡಚಣೆ)

ಶ್ರೀ ಅಧ್ಯಕ್ಷರು: ಅವರು ಏನು ಮಾತನಾಡುತ್ತಾರೆ ಮೊದಲು ಕೇಳಿ. ರೀ ದೇಶಪಾಂಡೆಯವರೇ, ಕುಳಿತುಕೊಳ್ಳಿ. ದಯಮಾಡಿ ನಾನು ಈಗ ಏನು ಹೇಳುತ್ತೇನೆ ಅದನ್ನು ಕೇಳಿ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ.

ಶ್ರೀ ಎನ್. ಧರ್ಮಸಿಂಗ್: ಈ ಸರ್ಕಾರಕ್ಕೆ ಕಿಂಚಿತ್ತೂ ಸೌಜನ್ಯತೆ ಇಲ್ಲ.

(ಅಡಚಣೆ)

ನೀವು ಹಾಗೇ ಅಂದುಕೊಂಡು ಹೋಗಿ, ನಿಮಗೇ ಗೊತ್ತಾಗುತ್ತದೆ. ನೀವೂ ಕೂಡ ವಿದೇಶದಲ್ಲಿದ್ದಿರಿ. ಇವತ್ತು ನಾವು ಏಕೆ resolution ತರುತ್ತಿದ್ದೇವೆ ಅಂದರೆ, ಇದು ಗಡಿ ಭಾಗದಲ್ಲಿ ಆಗತಕ್ಕಂಥ ಅಧಿವೇಶನ; ಇದು ಬೇರೆ BJP, JD(S) ಅಧಿವೇಶನ ಆಗಬಾರದು. ಇದು ಕೇವಲ ಜನರ ಪರವಾಗಿ ಅಧಿವೇಶನ ಆಗಬೇಕು. ಮಹಾಜನ್ ವರದಿ ಅಂತಿಮ ಅನ್ನತಕ್ಕ ರೀತಿಯಲ್ಲಿ ಇವತ್ತು ತಾವು resolution ಗೆ ಮಾನ್ಯತೆ ಕೊಡಲಾರದೆ ಹೋದರೆ, ನಾವು ಕರ್ನಾಟಕದ ಸಮಸ್ಯೆಗಳಿಗೆ ವಿರೋಧವಾಗಿದ್ದೇವೆ ಎನ್ನತಕ್ಕಂಥ ಮಾತು ಬರುತ್ತದೆ.

(ಅಡಚಣೆ)

ಅದಕ್ಕೇ ನಾವು ಮಹಾಜನ್ ವರದಿ ಬಗ್ಗೆ ಅಂತಿಮ ನಿರ್ಧಾರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ. ಯಾರು ಪದೇ ಪದೇ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ ಈ ಒಂದು ಐತಿಹಾಸಿಕವಾದ ಅಧಿವೇಶನ ಗಡಿ ಭಾಗದಲ್ಲಿ ನಡೆಯುತ್ತಿದೆ ಅಂತ. ಇವತ್ತು ರಾಜ್ಯ ಸರ್ಕಾರಕ್ಕೆ ಗೊತ್ತಿರಬಹುದು. Belgaum Corporation ಕೂಡ ಮಹಾರಾಷ್ಟ್ರಕ್ಕೆ ಹೋಗಬೇಕು ಎನ್ನತಕ್ಕಂಥ resolution pass ಮಾಡಿದ್ದಾರೆ. ನಾನು ಮುಖ್ಯ ಮಂತ್ರಿಯಾಗಿದ್ದಾಗ Belgaum Corporationನ ಮಾನ್ಯತೆಯನ್ನು ರದ್ದು ಮಾಡಿದ್ದೇನೆ. ಅದಕ್ಕೇ ಇವತ್ತು ಸರ್ಕಾರ ಮಹಾಜನ್ ವರದಿ ಅಂತಿಮ ಎಂದು ನಮ್ಮ ಪಕ್ಷದ ಪರವಾಗಿ ಏನು ಒಂದು ನಿರ್ಣಯವನ್ನು ಮಂಡಿಸಿದ್ದೇವೆ, ಇದಕ್ಕೆ ಒಪ್ಪಲೇ ಬೇಕು. ಇದಕ್ಕೆ ಒಪ್ಪಿ ಕೇಂದ್ರ

ಸರ್ಕಾರ ಏನೇ ಮಾತನಾಡಲಿ, ನಾವೆಲ್ಲಾ ಒಟ್ಟಾಗಿ ಕರ್ನಾಟಕದ ಘನತೆ ಹಾಗೂ ಗೌರವದ ಬಗ್ಗೆ ನಾವೆಲ್ಲರೂ ಕೂಡ ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ನಾವು ಈ ಒಂದು resolutionಗೆ ತಾವು ಮಾನ್ಯತೆ ಕೊಡಬೇಕು, ಅದನ್ನು ತಾವು ಒಪ್ಪಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಈ ನಿರ್ಣಯದ ಪರ ವಿರೋಧ ಮಾತನಾಡಲಿಕ್ಕೆ ನಿಂತಿಲ್ಲ. ಇಲ್ಲಿ ನಾವು ಒಂದು ಹಕ್ಕು ಚ್ಯುತಿ ನಿರ್ಣಯವನ್ನು ಮಂಡಿಸಿದ್ದೇವೆ. ನಾವು ಏನಾದರೂ ಹಕ್ಕು ಚ್ಯುತಿ ನಿರ್ಣಯವನ್ನು ಮಂಡನೆ ಮಾಡಿದ ಮೇಲೆ, ತಾವು ಅದರ ಬಗ್ಗೆ ಏನಾದರೂ ಹೇಳದೆ ಬೇರೆ ಕಾರ್ಯಕಲಾಪಗಳಿಗೆ ಹೋಗುವುದಕ್ಕೆ ನಿಯಮದಲ್ಲಿ ಅವಕಾಶ ಇಲ್ಲ. ದಯಮಾಡಿ ಹಕ್ಕು ಚ್ಯುತಿ ನಿರ್ಣಯವನ್ನು ಮೊದಲು ಮಂಡಿಸುವುದಕ್ಕೆ ಅವಕಾಶ ಕೊಟ್ಟು ಆಮೇಲೆ ಬೇರೆ ನಿರ್ಣಯಗಳ ಬಗ್ಗೆ ತಾವು ಚರ್ಚೆ ಮಾಡಬೇಕು. ನಿಯಮ ಬಿಟ್ಟು ಸದನ ನಡೆಸುವುದಕ್ಕೆ ಆಗುವುದಿಲ್ಲ. ನಾವು ನಿಮಗೆ ಕೊಟ್ಟಿದ್ದೇವೆ. Adjourment Motion ಕೊಟ್ಟಾಗ, Privilege Motion ಕೊಟ್ಟಾಗ you must consider that first. ನಾವು ಏನು Privilege Motion move ಮಾಡಿದ್ದೇವೆ ಅದರ ಬಗ್ಗೆ ತಾವು ಮೊದಲು ಮಾತನಾಡಬೇಕು. ಆನಂತರ ಬೇರೆ Motionಗಳನ್ನು ತಾವು allow ಮಾಡಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್: ಸರ್ವಾನುಮತದ ನಿರ್ಣಯವನ್ನು ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ಮಹಾಜನ್ ವರದಿ ಕಾರ್ಯಗತ ಮಾಡಬೇಕೆಂದು ಈ ಸದನದಲ್ಲಿ ಅನೇಕ ಬಾರಿ ನಿರ್ಣಯಗಳನ್ನು ಮಾಡಿದ್ದೇವೆ.

(ಅಡಚಣೆ)

ಶ್ರೀ ಅರಗ ಜ್ಞಾನೇಂದ್ರ: ಲಂಚ್ ಬ್ರೇಕ್ ಕೊಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಇವತ್ತು ಆ ನಿರ್ಣಯ ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ಆ ನಿರ್ಣಯ ಸರ್ವಾನುಮತದ ನಿರ್ಣಯವಾದರೆ ಈ ಸದನ ನಡೆಸಿದ್ದಕ್ಕೂ ಬೆಳಗಾವಿಯಲ್ಲಿ ಸದನ ನಡೆಸಿದ್ದಕ್ಕೆ ಕೀರ್ತಿ ಹಾಗೂ ಶಕ್ತಿ ಬರುತ್ತದೆ. ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಬಹಳ ಕಟುವಾದ ಶಬ್ದಗಳಲ್ಲಿ ಯಾವ ರೀತಿ ಇದೆ ಎಲ್ಲಾ ರೀತಿ ಮಾಡಬೇಕಾಗುತ್ತದೆ. ಆದರೆ, ನಾವು ಕೊಟ್ಟಿರತಕ್ಕಂಥದ್ದು ಏನು? ಹಕ್ಕು ಚ್ಯುತಿ ನಿರ್ಣಯ ಕೊಟ್ಟಮೇಲೆ ಮಿಕ್ಕ ಯಾವ

ನಿರ್ಣಯವನ್ನೂ ತೆಗೆದುಕೊಳ್ಳುವುದಕ್ಕೆ ಇಲ್ಲಿ ಸಾಧ್ಯವಿಲ್ಲ. ಅದು ನೀವು ತೀರ್ಮ ಕೊಡಬೇಕಾಗಿರುವುದು. ಮಿಕ್ಕ ವಿಚಾರ ಬೇರೆ. ನಿರ್ಣಯದ ಬಗ್ಗೆ ನಮ್ಮದೇನೂ ಇಲ್ಲ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಅದನ್ನು ವಜಾ ಮಾಡಿದರು. ಅದಕ್ಕೆ ರಾಜ್ಯದ ಜನ ಬಹಳ ಸಂತೋಷ ಪಟ್ಟಿದ್ದಾರೆ. ಈ ನಿರ್ಣಯ ಸರ್ವಾನುಮತದ ನಿರ್ಣಯವಾಗಲಿ. ಎಲ್ಲರೂ ಒಪ್ಪಿದ ನಿರ್ಣಯ ಆಗಲಿ. ಆದರೆ ನಿರ್ಣಯವನ್ನು ಈಗ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಹಕ್ಕು ಚ್ಯುತಿ ಬಗ್ಗೆ ಏನು ಎಂಬುದನ್ನು ತಾವು ಮೊದಲು ಈ ಸದನಕ್ಕೆ ಹೇಳಿ. ಮೊದಲು ಹಕ್ಕುಚ್ಯುತಿ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ನಂತರ ಮಿಕ್ಕ ನಿರ್ಣಯಗಳು. ಅದನ್ನು ಬಿಟ್ಟು ಮಹಾಜನ್ ವರದಿ ಬಗ್ಗೆ ನಾನು ನಿರಂತರವಾಗಿ, ಉಸಿರಾಟ ಇರುವ ವರೆಗೂ ಹೋರಾಟ ಮಾಡುತ್ತೇನೆ. ಬೆಳಗಾವಿಯ ಬಗ್ಗೆಯೂ ಉಸಿರು ಇರುವವರೆಗೂ ಹೋರಾಟ ಮಾಡುತ್ತೇವೆ. ಒಂದು ಅಂಗುಲ ಜಾಗವನ್ನೂ ಬೇರೆ ರಾಜ್ಯದವರಿಗೆ ಕೊಡುವುದಿಲ್ಲ. M.E.S. ವಿರುದ್ಧ ನಿರಂತರ ಹೋರಾಟ ಮಾಡುತ್ತೇವೆ. ಅದರ ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲ. ಅದರಲ್ಲೂ ಐಸಿಹಾಸಿಕವಾದಂತಹ ಇಲ್ಲಿ ಆ ಒಂದು ನಿರ್ಣಯವನ್ನು ನಾವು ಮಾಡದೇ ಹೋದರೆ, ಈ ಸದನಕ್ಕೆ ಬೆಲೆ ಬರುವುದಿಲ್ಲ. ಅದನ್ನೆಲ್ಲಾ ನಾವು ಒಪ್ಪುತ್ತೇವೆ. ಆದರೆ ಆ ನಿರ್ಣಯ ಸರ್ವಾನುಮತದ ನಿರ್ಣಯವಾಗಬೇಕು. ಮತ್ತು ಹಕ್ಕು ಚ್ಯುತಿಯ ಬಗ್ಗೆ ತಾವು ಮೊದಲು ಸ್ಪಷ್ಟ ಪಡಿಸಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ನಾವು ಮೊದಲು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದೇವೆ. ಅದಕ್ಕೆ Congress ಸದಸ್ಯರೂ ಕೂಡ ಸಹಿ ಮಾಡಿದ್ದಾರೆ. ನಿಯಮಾವಳಿಗಳ ಪ್ರಕಾರ ಮೊದಲು ಹಕ್ಕು ಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಇನ್ನೊಂದು ನಿರ್ಣಯ ತೆಗೆದುಕೊಳ್ಳುವುದು ಅದು ಬೇರೆ ಪ್ರಶ್ನೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಮಂಡಿಸಿರತಕ್ಕಂಥ ಹಕ್ಕು ಚ್ಯುತಿ ನಿರ್ಣಯದ ಬಗ್ಗೆ ನೀವು ಒಂದು ನಿರ್ಣಯವನ್ನು, ಅಭಿಪ್ರಾಯವನ್ನು ಕೊಡದೇ ಹೋದರೆ ಇನ್ನೊಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ಹಕ್ಕು ಚ್ಯುತಿ ನಿರ್ಣಯದ ಬಗ್ಗೆ ಮೊದಲು ತೀರ್ಮಾನ ಮಾಡಿ. ನಂತರ ನೀವು ಯಾವುದನ್ನು ಚರ್ಚೆ ಮಾಡುತ್ತೀರೋ ಅದು ಸಭೆಗೆ ಬಿಟ್ಟಿದ್ದು. ಸಭೆಯ ಹಕ್ಕಿನ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಅದು ಸಭೆಯ ಹಕ್ಕು.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್): ಒಂದು ನಿಮಿಷ ನಾನು ಹೇಳಿಬಿಡುತ್ತೇನೆ. ಇಲ್ಲೇ ಈ ರೀತಿ ನಡೆದಿದೆ. ಅದಕ್ಕಾಗಿ ನಾನು ಮೊದಲು ಹೇಳಿಬಿಡುತ್ತೇನೆ. ಏಕೆಂದರೆ ನೀವು ಎರಡೂ ಬೇಡ ಎಂದು ಹೇಳುವವರು, ಏಕೆಂದರೆ, ನಾವು ಒಂದು ಬೇಕು ಎನ್ನುವವರು, ಅವರು ಒಂದು ಬೇಕು ಎನ್ನುವವರು, ಇದು ಪ್ರಸ್ತಾಪ ಬಂದಿದ್ದು, ನಿರ್ಣಯವನ್ನು ಮಂಡಿಸಿದ್ದು ವಿರೋಧ ಪಕ್ಷದ ನಾಯಕರು. ಇದು ಎಲ್ಲರಿಗೂ ಬೇಕಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ರಾಜ್ಯದ ಜನ ಏನು ಅಪೇಕ್ಷೆ ಪಟ್ಟಿದ್ದರೋ, ಮತ್ತು ಏನು ಅಪೇಕ್ಷೆ ಮಾಡುತ್ತಿದ್ದಾರೆ, ಆ ನಿರ್ಣಯವನ್ನು ವಿರೋಧ ಪಕ್ಷದ ನಾಯಕರು ಇವತ್ತು ಮಂಡಿಸಿದ್ದಾರೆ, ಅದೇ ನಿರ್ಣಯವನ್ನು ನಾವು ಮಂಡಿಸುತ್ತೇವೆ, ಅಥವಾ ಸರ್ಕಾರದ ವತಿಯಿಂದ ಮಂಡಿಸುತ್ತೇವೆಂದು ಮುಂದೆ ಬಂದಿದ್ದರೆ, ಈ ತಾಪತ್ರಯ ಏನೂ ಇರಲಿಲ್ಲ. ಅಥವಾ ಇದು prestige issue ಏನಲ್ಲ. ಏಕೆಂದರೆ ಈ ಒಂದು ವಿಷಯದಲ್ಲಾದರೂ ಎಲ್ಲರೂ ಕೂಡ ಒಂದೇ ಇದ್ದೇವೆ ಮತ್ತು ಮಹಾಜನ್ ಕಮಿಷನ್ ಅಂತಿಮ. ಇದು ಎಲ್ಲರ ಮೇಲೆ binding ಇದೆ. ಇದನ್ನು ಯಾರೂ ಕೂಡ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಯಾವುದೇ ಸರ್ಕಾರ ಇರಬಹುದು. ಕೇಂದ್ರ ಸರ್ಕಾರ ಇರಬಹುದು ಅಥವಾ ಮಹಾರಾಷ್ಟ್ರ ಸರ್ಕಾರ ಇರಬಹುದು, ಅಥವಾ ಇನ್ಯಾವುದೇ ಸರ್ಕಾರ ಇರಬಹುದು, ಈ ಒಂದು ಮಹಾಜನ್ Commission Report ಅಂತಿಮವಾಗಿದೆ ಎನ್ನತಕ್ಕಂಥ message ಅನ್ನು ಈ ಬೆಳಗಾವಿ ಅಧಿವೇಶನದಿಂದ ನಾವು ಕೊಡಬೇಕಾಗಿದೆ. ಮೊದಲನೇ ದಿವಸವೇ ಏಕೆ ತಂದಿದ್ದು ಎಂದರೆ ಪ್ರಪ್ರಥಮವಾಗಿ ತಾವು ಈ ಅಧಿವೇಶನವನ್ನು ಇಲ್ಲಿ ಕರೆದಿದ್ದೀರಿ. ಅದಕ್ಕಾಗಿ ಜನರ ಅಪೇಕ್ಷೆಯೂ ಕೂಡ ಮೊದಲನೇ ದಿವಸವೇ ಈ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಇರುತ್ತದೆ. ಇದರ ಜೊತೆಗೆ ಇವತ್ತು ಮಹಾರಾಷ್ಟ್ರದವರೂ ಕೂಡ ಇದಕ್ಕೆ ಪ್ರತಿಯಾಗಿ ಅಲ್ಲಿ ಒಂದು ಸಭೆಯನ್ನು ಏರ್ಪಡಿಸಿ ಅದಕ್ಕೆ Home Minister ಮತ್ತು Deputy Minister ಬಂದು ಇದಕ್ಕೆ ಪ್ರಚೋದನೆ ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಪ್ರತಿ ಸವಾಲಾಗಿ, ಈ ನಿರ್ಣಯವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇದು prestige issue ಅಲ್ಲ. ಈಗ ಅವರು ಹೇಳಿದರು, ಇಲ್ಲ Privilege Motion ಅನ್ನು ನಾವು move ಮಾಡಿದ್ದೇವೆ. ಅದಕ್ಕೇ ಇದನ್ನು ತೆಗೆದುಕೊಳ್ಳತಕ್ಕಂಥದ್ದು

ಬೇಡ ಎಂದರು. Privilege Motion ಗೆ ತಾವು ದುರ್ದೈವದಿಂದ ಈಗ ನಮ್ಮ signature ತೆಗೆದುಕೊಂಡಿರಿ. ನಾವು ಈ ನಿರ್ಣಯವನ್ನು ತಮಗೆ ಎರಡು ತಾಸು ಮುಂಚೇನೇ ಕೊಟ್ಟಿದ್ದೇವೆ. ಬಹುಶಃ ನಾವು 11:30 ರಿಂದ 12.00 ಗಂಟೆಗೆ ನಾವು ಇದನ್ನು ತಮಗೆ ತಲುಪಿಸಿದ್ದೇವೆ. ಆದರೆ Privilege notice ಕೊಟ್ಟದ್ದು ಈಗ. ಅದಕ್ಕಾಗಿ ಈ ವ್ಯತ್ಯಾಸ ಆಗಿದೆ. ಇಲ್ಲ ನಿಮ್ಮ Privilege notice ಅನ್ನು ಚರ್ಚೆಗೆ ತೆಗೆದುಕೊಳ್ಳಬಾರದು ಎಂದು ನಮ್ಮ ಉದ್ದೇಶ ಅಲ್ಲ. ಆದರೆ ಪ್ರಥಮವಾಗಿ ಈ ನಿರ್ಣಯವನ್ನು ತೆಗೆದುಕೊಳ್ಳಬೇಕೆಂಬುದೇ ನಮ್ಮ ಅನಿಸಿಕೆ. ದಯವಿಟ್ಟು ತಾವು ಇದಕ್ಕೆ ಅವಕಾಶ ಮಾಡಿ ಕೊಟ್ಟರೆ, ಒಂದು ಒಳ್ಳೆಯ message ಹೋಗುತ್ತದೆ. ಸಭಾನಾಯಕರೂ ಇದ್ದಾರೆ, ಉಪ ನಾಯಕರು ಇದ್ದಾರೆ, ಮತ್ತು ಮಾತಿನಲ್ಲಿ ಅತ್ಯಂತ ಚತುರವಾಗಿ, ಎಲ್ಲರಿಗೂ convince ಮಾಡತಕ್ಕಂಥ ಕೆಪ್ಯಾಸಿಟಿ ಇರತಕ್ಕಂಥ ಮಾನ್ಯ ಗೃಹ ಸಚಿವರು ಇದ್ದಾರೆ; ಅವರ್ಯಾಕೆ ಪದೇ ಪದೇ ಪುಸ್ತಕ ತೆಗೆದುಕೊಂಡು ಅಡ್ಡ ಬರುತ್ತಾರೋ ನನಗೆ ಗೊತ್ತಾಗುತ್ತಿಲ್ಲ. ಆದರೆ ತಮಗೆ ಸಂಪೂರ್ಣವಾದ ಅಧಿಕಾರ ಇದೆ, ಆ ಎಲ್ಲಾ rules ಗಳನ್ನು ತಳ್ಳಿ ಹಾಕುವಂಥ ಸರ್ವ ಅಧಿಕಾರ ನಿಮಗೆ ಇದೆ. ಈ House ನ ಈ ಸದನದ ಈ ಮನೆಯ Supreme Authority ಎಂದರೆ ತಾವು. ಆದುದರಿಂದ ತಾವು ಆ ಎಲ್ಲಾ rules ಗಳನ್ನು ಬದಿಗಿಟ್ಟು, ಇದಕ್ಕೆ ತಾವು ಅವಕಾಶ ಮಾಡಿಕೊಡಿ, ಆ rules ಅನ್ನು ಓದತಕ್ಕಂಥ ಅವಶ್ಯಕತೆನೂ ಇಲ್ಲ. ನಿಮಗೆ ಸಂಪೂರ್ಣವಾದಂಥ ಅಧಿಕಾರ ಇದ್ದ ಕಾರಣ, ಇದಕ್ಕೆ ತಾವು ಮನ್ನಣೆ ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈಗೇನು resolution move ಮಾಡಿದ್ದಾರೆ, ಅದಕ್ಕೆ ನಾನು ಸಂಪೂರ್ಣವಾಗಿ ಬೆಂಬಲ ಕೊಡುತ್ತೇನೆ, ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ನೀವು ನಲವತ್ತು ವರ್ಷದಲ್ಲಿ ಏನು ಮಾಡಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಅಧಿಕೃತವಾದಂಥದ್ದಲ್ಲ ಅದು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಶ್ರೀರಾಮರೆಡ್ಡಿ ಹಾಗು ಬೇರೆಯವರು ಇಲ್ಲಿ ಎತ್ತಿರತಕ್ಕಂಥ ವಿಷಯಗಳ ಬಗ್ಗೆ, ನಮ್ಮ ಎಲ್ಲಾ ಸಹಮತ ಇದೆ. ಈ ಸದನ ನಡೆಯಬೇಕಾದರೆ, ಯಾವ ನಿಯಮಾವಳಿಗಳ ಪ್ರಕಾರ ನಾವು ನಡೆಸಬೇಕು ಎಂಬುದಕ್ಕಾಗಿ ನಾವೇ ತಯಾರು ಮಾಡಿರುವಂಥ ನಿಯಮಾವಳಿಗಳಿವೆ.

2.30 ಪಿ.ಎಂ.

ಆ ನಿಯಾಮವಳಿ 191ರ ಪ್ರಕಾರ ಹಕ್ಕುಬಾಧ್ಯತೆ ಪ್ರಶ್ನೆ ಮತ್ತು 192ರ ಪ್ರಕಾರ ಹಕ್ಕುಬಾಧ್ಯತೆ ಪ್ರಶ್ನೆಯ ಸಂಬಂಧದಲ್ಲಿ ಸೂಚನಾ ಪತ್ರ ಎಂದು ಇದೆ.

Sri K.R. Ramesh Kumar: Sir, I am on a Point of Order.

Sri M.P. Prakash: Sir, there cannot be any Point of Order on a matter when I myself has raised a technical objection....

Sri K.R. Ramesh Kumar: It is for the Chair to decide whether there cannot be any Point of Order or not. You cannot take a decision.

Sri M.P. Prakash: No. I am making a submission to the Chair. No, there cannot be a Point of Order on a matter where I have raised a matter, which is a violation of it. ಈಗ ಮಾನ್ಯ ಕಾಂಗ್ರೆಸ್ ಸದಸ್ಯರ ಸಹಿಯನ್ನು ಹಕ್ಕುಬಾಧ್ಯತೆ ವಿಷಯಕ್ಕೆ ಸಂಬಂಧಪಟ್ಟಂತೆ ಪಡೆದುಕೊಂಡಿದ್ದಾರೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಆದ್ದರಿಂದ ನಾನು ಹಕ್ಕು ಬಾಧ್ಯತೆ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು ಕ್ರಿಯಾ ಲೋಪವನ್ನು ಎತ್ತಿದ್ದೇನೆ. ಆದ್ದರಿಂದ ನೀವು ನನಗೆ ಅವಕಾಶ ಕೊಡಬೇಕು.

Sri M.P. Prakash: There cannot be a Point of Order on a matter, when I am seriously objecting violation of the rules which we ourselves have framed it. ಇದರ ಬಗ್ಗೆ ಹೇಳತಕ್ಕಂಥ ಪ್ರಶ್ನೆ ಏನೆಂದರೆ,

(ಅಡಚಣೆ)

ಶ್ರೀ ಜಗದೀಶ್ ಶೆಟ್ಟರ್: ಅವರು ಹೇಳತಕ್ಕಂಥದ್ದನ್ನು ಮೊದಲು ಕೇಳಿ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಸಚಿವರ ಪ್ರಸ್ತಾಪಕ್ಕೆ ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ. ಮಾನ್ಯ ಸಚಿವರು ನಿಯಮ 191ನ್ನು ಓದುತ್ತಿದ್ದೀರಿ. ಹಾಗೆಯೇ Kindly go through Rule 220 also. Whether this House is in order? Whether the sitting of the House is in Order?

Sri M.P. Prakash: Sir, You are a very enlightened person. Therefore, enlighten us. I don't come in the way at all.

Sri K.R. Ramesh Kumar: Definitely I am not as eminent as you are. Kindly have patience and go through Rule 220 also. Kindly examine Rule 220 also. You examine yourself.

Sri M.P. Prakash: No. You are very enlightened person.

ಶ್ರೀ ಕೆ.ಆರ್.ರಮೇಶ್ ಕುಮಾರ್: .... ನೀವು ಮಾಡಿರತಕ್ಕಂಥದ್ದು ಸಂವಿಧಾನದ ಪ್ರಕಾರ ಇದೆಯೇ ಎಂಬುದನ್ನು ದಯಮಾಡಿ ನೋಡಿ?

Sri M.P. Prakash: Don't take it personally.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಕ್ರಿಯಾಲೋಪ ಎತ್ತಿರತಕ್ಕಂಥದಕ್ಕೆ ಅವಕಾಶ ಕೊಟ್ಟಿದ್ದೀರಾ ಅಥವಾ ಕೊಟ್ಟಿಲ್ಲವೇ ಎನ್ನತಕ್ಕಂಥದ್ದನ್ನು ಹೇಳತಕ್ಕಂಥ ಸ್ಥಿತಿಯಲ್ಲಿ ತಾವು ಇಲ್ಲ. ಆದ್ದರಿಂದ ನಾನು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಕುಳಿತುಕೊಳ್ಳಬೇಕಾಗಿದೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಈಗ ನಾನು ಹೇಳುವುದೇನೆಂದರೆ, ನೀವೂ ಕೂಡ ಸ್ಪೀಕರ್ ಆಗಿ ಕೆಲಸ ಮಾಡಿದ್ದೀರಿ.

ಅಧ್ಯಕ್ಷರು: ನಾನು ಹೇಳುವುದನ್ನು ಎಲ್ಲರೂ ದಯಮಾಡಿ ಸ್ವಲ್ಪ ಕೇಳಿ.

Sri K.R. Ramesh Kumar: I am a party to the resolution. But I have my right as a Member.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಸ್ಪೀಕರ್ ಆಗಿ ಕೆಲಸ ಮಾಡಿದ್ದಾರೆ. ಸದನದ ನಿಯಮಾವಳಿ ಏನಿದೆ ಎನ್ನತಕ್ಕಂಥದ್ದು ಅವರಿಗೆ ಗೊತ್ತಿದೆ. ಮತ್ತೆ 192ರಲ್ಲಿ ಇರತಕ್ಕಂಥದ್ದನ್ನು ಅವರು ಯಾವುದನ್ನೂ ಮರೆತ್ತಿಲ್ಲ ಎನ್ನತಕ್ಕಂಥದ್ದು ನನಗೆ ಗೊತ್ತಿದೆ. ನಿಯಮ 192ರಲ್ಲಿ ಏನಿದೆ ಎಂದರೆ, ಹಕ್ಕು ಬಾಧ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು, ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಪತ್ರವನ್ನು ಕೊಡತಕ್ಕದ್ದು. ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ, ಸೂಚನಾ ಪತ್ರದೊಂದಿಗೆ ಸಂಬಂಧಪಟ್ಟ

ದಸ್ತಾವೇಜು ಇರತಕ್ಕದ್ದು. ಹಕ್ಕು ಬಾಧ್ಯತೆ ಪ್ರಶ್ನೆಯನ್ನು ಹಾಕುವ ಹಕ್ಕು, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು; ಅಂದರೆ,

(1) ಅದೇ ಉಪವೇಶನದಲ್ಲಿ ಒಂದಕ್ಕಿಂತ ಹೆಚ್ಚು ಪ್ರಶ್ನೆಯನ್ನು ಹಾಕತಕ್ಕುದಲ್ಲ;

(2) ಇತ್ತೀಚಿನ ಘನತೆಯ, ನಿರ್ದಿಷ್ಟ ವಿಷಯಕ್ಕೆ ಮಾತ್ರ ಪ್ರಶ್ನೆಯು ಸೀಮಿತವಾಗಿರತಕ್ಕುದು.

(3) ಆ ವಿಷಯದಲ್ಲಿ ಸದನದ ಮಧ್ಯಸ್ಥಿಕೆ ಅವಶ್ಯಕವಾಗಿರಬೇಕು:

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಮಗೆಲ್ಲಾ ಅತ್ಯಂತ ಹಿರಿಯ ಸದಸ್ಯರಾಗಿದ್ದಾರೆ. ಹಕ್ಕುಬಾಧ್ಯತೆ ಸೂಚನೆಗೆ ಈಗ ನನ್ನ ಸಹಿಯನ್ನು ತೆಗೆದುಕೊಂಡರೆಂದು ಅವರು ಹೇಳಿದರು. ಅಂದರೆ, ಸದನಕ್ಕೆ ಬಂದಾಗ ಸದರಿ ಸೂಚನೆಗೆ ಸಹಿ ಮಾಡಿದ್ದೇವೆಂದು ಹೇಳಿದ್ದಾರೆ. ಮಾನ್ಯ ರಮೇಶ್‌ಕುಮಾರ್ ರವರು ಇಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿರುವ ಕಾರಣದಿಂದ, ಇದರಲ್ಲಿ ತಾಂತ್ರಿಕವಾಗಿ ತಪ್ಪಾಗಿದೆ ಎಂದು ಅವರಿಗೆ ಗೊತ್ತಾಗಿದೆ. ಏಕೆಂದರೆ ನಮ್ಮ ಸಂಪ್ರಾದಾಯದ ಪ್ರಕಾರ ಇಲ್ಲಿ ಸಹಿ ಮಾಡತಕ್ಕಂಥದ್ದು ಇಲ್ಲ. ನಿಯಮ 191ರ ಕೆಳಗೆ ಹಕ್ಕುಬಾಧ್ಯತೆಗೆ ಸೂಚನಾ ಪತ್ರವನ್ನು ಕೊಡಬೇಕಾದರೆ, ಸದನ ಸೇರುವುದಕ್ಕಿಂತ ಒಂದು ಗಂಟೆ ಮುಂಚೆ ಕೊಡಬೇಕೆಂಬುದು ನಮ್ಮ ಸಂಪ್ರಾದಾಯವಾಗಿದೆ. ಒಂದು ವೇಳೆ ಸಂಪ್ರದಾಯವನ್ನು ಮುರೆಯುತ್ತೇವೆಂದರೂ ಕೂಡ, ಅಧಿವೇಶನ ಕರೆಯುವುದಕ್ಕಿಂತ ಪೂರ್ವದಲ್ಲಿ ಹಕ್ಕುಬಾಧ್ಯತೆಯ ಒಂದು ಸೂಚನಾ ಪತ್ರವನ್ನು ತಮಗೆ ಕೊಡಬೇಕು. ಅದರ ಪ್ರತಿಗಳನ್ನು ನಮಗೂ ಕೂಡ ಕೊಡಬೇಕಾಗುತ್ತದೆ. ಅಂದರೆ, ಅವರು ಯಾವ ವಿಷಯದ ಮೇಲೆ ಹಕ್ಕುಬಾಧ್ಯತೆಯನ್ನು ಎತ್ತಿದ್ದಾರೆಂಬುದು ಮತ್ತು ಆ ವಿಚಾರದಲ್ಲಿ ಸರ್ಕಾರ ಕಡೆಯಿಂದ ಪ್ರತಿಕ್ರಿಯೆ ಕೊಡತಕ್ಕಂಥದ್ದು ಏನಿದೆ ಎಂಬುದು ಮತ್ತೆ ಮಾನ್ಯ ಸರ್ವ ಸದಸ್ಯರು ಯಾವ ರೀತಿಯಾಗಿ ಹಕ್ಕುಚ್ಯುತಿ ಆಗುತ್ತದೆಯೇ ಅಥವಾ ಇಲ್ಲವೋ ಎನ್ನತಕ್ಕಂಥ ವಿಚಾರಗಳ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ಹಕ್ಕುಚ್ಯುತಿ ತಂದಿರತಕ್ಕಂಥ ವಿಷಯದಲ್ಲಿ ತಾಂತ್ರಿಕವಾದಂಥ ದೋಷವಿದೆ. ಅವರು ಯಾವುದಾದರೂ ನಿಯಮದಲ್ಲಿ ತಂದರೆ, ಅದನ್ನು ನಿರ್ಧರಿಸತಕ್ಕಂಥದ್ದು ತಮ್ಮ ಸಂಪೂರ್ಣವಾದ ವಿವೇಚನೆಗೆ ಬಿಟ್ಟಿದ್ದು. ಇನ್ನು ಮಹಾಜನ್ ಆಯೋಗದ ವಿಚಾರದಲ್ಲಿ ತಾವು ಗೊತ್ತುವಳಿಯನ್ನು ತಂದಿದ್ದೀರಿ. ಇದಕ್ಕೆ ಸಂಪೂರ್ಣ ವಾದಂಥ ಸಹಮತಿ

ನಮ್ಮದೂ ಕೂಡ ಇದೆ. ಬೆಳಗಾವಿಯಲ್ಲಿ ಅಧಿವೇಶನ ಕರೆಯುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನಿರ್ಧಾರ ಮಾಡಿರತಕ್ಕಂಥದ್ದು, ಸರ್ಕಾರ ನಿರ್ಧಾರ ಮಾಡಿರತಕ್ಕಂಥದ್ದೇ ಇಂಥ ಒಂದು ರಾಜಕೀಯ ಇಚ್ಛಾಶಕ್ತಿಯನ್ನು ಅಭಿವ್ಯಕ್ತಮಾಡಿರತಕ್ಕಂಥದ್ದು; ಈ ಕಿಡಿಗೇಡಿತನದ ಮೂಲಕವಾಗಿ ಈಗ ಸಂಪೂರ್ಣವಾಗಿ ನಿರ್ಣಯವಾಗಿರತಕ್ಕಂಥ ಒಂದು ಸಮಸ್ಯೆಯನ್ನು ಪದೇಪದೇ ಕೆದಕುವುದರ ಮೂಲಕವಾಗಿ ದೇಶದ ಸ್ವಾಂತ್ರ್ಯವನ್ನು ಮತ್ತು ಕಾನೂನನ್ನು ಬುಡಮೇಲು ಮಾಡುವಂಥ ಆ ಪ್ರಯತ್ನದ ಕೆಲವು ಜನಗಳಿಗೆ ಉತ್ತರ ಕೊಡತಕ್ಕಂಥದ್ದೇ ಈ ಅಧಿವೇಶನವಾಗಿದೆ. ಅದರಲ್ಲಿ ತಾವೇನು ತಂದಿದ್ದೀರಿ, ಅದರ ಬಗ್ಗೆ ಕೂಡ ಹೇಳುತ್ತೇನೆ. ದಯಮಾಡಿ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಅವರು ಕೇಳತಕ್ಕಂಥದ್ದಕ್ಕೆಲ್ಲಾ ನಾವು ಉತ್ತರ ಕೊಡುತ್ತೇವೆ. ನಾವೂ ಕೂಡ ನಿಮ್ಮ ಜೊತೆ ಇದ್ದೆವು. ನೀವು ಪತ್ರ ಬರೆದಿದ್ದೀರಿ. ನೋಡಿ ಈಗ ಅದಕ್ಕೆಲ್ಲ ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರನ್ನು ತಾವು ಕೇಳಿ? You may raise a Point of Order if you want to. I have not yielded. ನನ್ನ ಮಾತು ಇನ್ನೂ ಮುಗಿದಿಲ್ಲ ಮತ್ತೆ ನಾನು ಇನ್ನೂ ಕುಳಿತುಕೊಂಡಿಲ್ಲ. Please have patience. ತಾವು ದಯಮಾಡಿ ಕುಳಿತುಕೊಳ್ಳಿ, ನಾವು ಉತ್ತರ ಕೊಡುತ್ತೇವೆ. ತಾವು ಹಿರಿಯ ಸದಸ್ಯರಾಗಿದ್ದೀರಿ. ನಾನು ಮಾತನಾಡಿದ ಮೇಲೆ ತಾವು ಅವರಿಂದ ಅವಕಾಶ ಪಡೆದು ಅನಂತರ

(ಅಡಚಣೆ)

ಮಾತನಾಡಿ. Within a minute I will close. I am not yielded. ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ದಯಮಾಡಿ ಅವಕಾಶ ಕೊಡಿ. ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ನಮ್ಮ ಯಾವ ಸದಸ್ಯರ ಭಿನ್ನಾಭಿಪ್ರಾಯ ಇಲ್ಲ. ಆದರೆ ಆ ಒಂದು ಗೊತ್ತುವಳಿಯನ್ನು ನಾವೆಲ್ಲರೂ ಕೂಡ ನೋಡಿ ಅದರ ಬಗ್ಗೆ ಬಿಸೆನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡುವುದಕ್ಕೋಸ್ಕರ ಒಂದು ದಿನಾಂಕವನ್ನು ತಾವು ನಿರ್ಣಯವನ್ನು ಮಾಡಬೇಕಾಗುತ್ತದೆ. ಇದನ್ನು ಸರ್ಕಾರದ ವತಿಯಿಂದ ತರಬೇಕೇ ಅಥವಾ ತಾವು ತರಬೇಕೇ ಎಂಬುದರ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಣಯ ಮಾಡೋಣ. ಅದಕ್ಕೆ ಸಂಪೂರ್ಣವಾದ ಸಹಮತಿಯನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ.

(ಅಡಚಣೆ)

ಶ್ರೀ ಡಿ.ಕೆ. ಶಿವಕುಮಾರ್: ಅಸೆಂಬ್ಲಿಯನ್ನು ಇಲ್ಲಿ ನಡೆಸುವ ಬಗ್ಗೆ ನಮ್ಮ ನ್ಯಾರನ್ನೂ ಕರೆದು ಕೇಳಲಿಲ್ಲ. ಆದ್ದರಿಂದ ಈಗ ಏಕೆ ಕರೆಯಬೇಕು?

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ಸುಮ್ಮನೆ ಕುಳಿತುಕೊಳ್ಳಿ ನಾವು ನೋಡಿದ್ದೇವೆ.

(ಅಡಚಣೆ)

ಶ್ರೀ ಕೆ. ಪ್ರಭಾಕರ ಬಂಗೇರ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯ ಮಂತ್ರಿಗಳು ನಿಂತಿದ್ದಾರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ: ನಾನು ಇದನ್ನು ಖಂಡಿಸುತ್ತೇನೆ. ಇದು ಮುಖ್ಯಮಂತ್ರಿಗಳ ನಿರ್ಣಯವಾಗುವುದಕ್ಕೆ ಆಗುವುದಿಲ್ಲ. ಮುಖ್ಯಮಂತ್ರಿಗಳಿಗೆ ಅಧಿವೇಶನ ಕರೆಯಬೇಕೆಂದು ಹೇಳುವ ಅಧಿಕಾರ ಇದೆ. ಆದರೆ, ಇಲ್ಲಿ ಅಧಿವೇಶನ ಕರೆಯುವ ಬಗ್ಗೆ ಸ್ಪೀಕರ್ ನಿರ್ಣಯ ಮಾಡಬೇಕು. ತಾವು ಅಧಿವೇಶನ ಕರೆಯುವುದಕ್ಕೆ ರೆಕಮೆಂಡ್ ಮಾಡಬಹುದು. ಆದರೆ, ಇಲ್ಲಿಯೇ ಅಧಿವೇಶನ ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಯಾವುದೇ ಮುಖ್ಯಮಂತ್ರಿಗಳಿಗೆ ಇಲ್ಲವೆಂದು ನಾನು ಬಹಳ ವಿನಯದಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಈಗಾಗಲೇ ಸಲಹೆ ಕೊಟ್ಟಿದ್ದೇನೆ. ಭೋಜನದ ನಂತರ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದಿದ್ದೇನೆ. ದಯಮಾಡಿ ನಾನು ಹೇಳುವುದನ್ನು ಕೇಳಿ ಸ್ವಾಮಿ. ನನ್ನ ಮಾತನ್ನು ಪೂರ್ಣವಾಗಿ ಕೇಳದೆ ನೀವುಗಳು ಪದೇಪದೇ ನಿಂತುಕೊಂಡರೆ ಹೇಗೆ? ದಯಮಾಡಿ ನನ್ನ ಮಾತನ್ನು ಕೇಳಿ. ಮಾನ್ಯ ರಮೇಶ್ ಕುಮಾರ್‌ರವರೆ, ತಾವು ಈ ಸ್ಥಾನದಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೀರಿ. ನನ್ನ ಮಾತನ್ನು ಕೇಳದೆ ನೀವು ಪದೇಪದೇ ನಿಂತುಕೊಂಡು ನಿಮಗೆ ಇಷ್ಟಬಂದಂತೆ ಮಾಡಿಕೊಂಡು ಹೋದರೆ, ಈ ಸಭೆಯನ್ನು ನಡೆಸುವುದಕ್ಕೆ ಆಗುವುದಿಲ್ಲ. ನಾನು ಹೇಳುವುದನ್ನು ಕೇಳಿ. ನೀವು ಹಿರಿಯ ಸದಸ್ಯರು, ನಾನು ಹೇಳುವುದು ನಿಮಗೆ ಅರ್ಥವಾಗುವುದಿಲ್ಲ. ನನ್ನ ಮಾತನ್ನು ನೀವು ಕೇಳಬೇಕಲ್ಲವೆ? ಅದರ ಪ್ರಕಾರವೇ ನಾನು ಹೇಳುತ್ತಿರುವುದು. ದಯಮಾಡಿ ಕೇಳಿ ಸ್ವಾಮಿ. ಬಹಳ ಗಂಭೀರವಾದ ಪ್ರಮುಖವಾದ ವಿಚಾರವನ್ನು ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಯಾರದೂ ಕೂಡ ಎರಡು ಮಾತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ನಾವು ಮಾತನಾಡುವುದಕ್ಕೆ ನೀವು ಅವಕಾಶವನ್ನೇ ಕೊಡುತ್ತಿಲ್ಲ. ಎಲ್ಲ ನೀವೇ ಮಾತನಾಡಿದರೆ ಹೇಗೆ? ಅಧ್ಯಕ್ಷರು ನಾವು ಮಾತನಾಡುವುದನ್ನು ಕೇಳಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ: ದಯವಿಟ್ಟು ನೀವು ಸ್ವಲ್ಪ ಸಮಾಧಾನದಿಂದ ಕೇಳಿ. ಇದೊಂದು ಐತಿಹಾಸಿಕ ಅಧಿವೇಶನವಾಗಿದೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾತನಾಡುವುದಕ್ಕೆ ಅವರು ಮಾತ್ರ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದಾರೆಯೇ? ನಾನೂ ಕೂಡ ಮಾತನಾಡಬೇಕಾಗಿದೆ. ನನಗೂ ಕೂಡ ಅವಕಾಶ ಕೊಡಬೇಕು. ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಸಭಾಧ್ಯಕ್ಷರೇ ಕೇಳತಕ್ಕಂಥದ್ದು ನಿಜವಾಗಿಯೂ ಕೂಡ ವಿಷಯ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಸಭಾಧ್ಯಕ್ಷರು ಬೇಡಿಕೊಳ್ಳತಕ್ಕಂಥ ಸ್ಥಿತಿಯನ್ನು ತಾವು ತಂದಿದ್ದೀರಿ. ಇದು ** ನಮಗೆ ಅವಕಾಶ ಕೊಡಿ ಎಂದು ಮತ್ತೆ ಮತ್ತೆ ಮಾನ್ಯ ಸಭಾಧ್ಯಕ್ಷರನ್ನು ಕೇಳುವಂಥ ಪರಿಸ್ಥಿತಿ ಬಂದಿದೆ.

ಶ್ರೀ ಬಸವರಾಜ್ ರಾಯರೆಡ್ಡಿ: * ನಿಮಗೆ ಇರಬೇಕು.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ತಾವು ವಿದೇಶಕ್ಕೆ ಹೋಗಿ ಬಂದಿದ್ದೀರಿ. ಇದರ ಬಗ್ಗೆ ಬದಲಾವಣೆ ಮಾಡಿ ತಾವು ಒಳ್ಳೆಯ ನಿರ್ಧಾರ ತೆಗೆದುಕೊಳ್ಳುತ್ತೀರೆಂದು ನಾವು ತಿಳಿದುಕೊಂಡಿದ್ದೆವು. ಆದರೆ, ಇದನ್ನು ನೋಡಿದರೆ ಬೆಂಗಳೂರು ಅಧಿವೇಶನ ಧಾಟಿಯೇ ಬರುತ್ತಿರುವಂತೆ ಕಾಣುತ್ತಿದೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುವುದೇನೆಂದರೆ,

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಹೇಳಿದ್ದೇವೆ. ಮಾನ್ಯ ಪ್ರಕಾಶ್‌ರವರು ಹೇಳುವಾಗ ನಮಗೆ ಕಾನೂನಿನ ಪುಸ್ತಕವನ್ನು ತೋರಿಸುತ್ತಾರೆ.

(ಅಡಚಣೆ)

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಕಾಂಗ್ರೆಸಿನವರು ಹೇಳುವ ಹಾಗೆ ಎಲ್ಲವನ್ನೂ ಕೇಳಿಬಿಡಿ. ಎಲ್ಲಾ ಸರಿ ಹೋಗುತ್ತದೆ. ಸ್ಪೀಕರ್‌ರವರು

** ಈ ಪದಗಳನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಹೇಳುವುದಕ್ಕೆ ಬೆಲೆ ಇಲ್ಲ. ಅವರು ಹೇಳತಕ್ಕಂಥದ್ದೇ ಅಂತಿಮ ತೀರ್ಮಾನ ಆಗಬೇಕೆನೋ?

(ಅಡಚಣೆ)

ಶ್ರೀ ಎನ್.ಧರ್ಮಸಿಂಗ್: ಈ ರಾಜ್ಯದ ಘನತೆ ಗೌರವವನ್ನು ಎತ್ತಿ ಹಿಡಿಯತಕ್ಕಂಥ ಕೆಲಸದ ಬಗ್ಗೆ ನಾವು ಇವತ್ತು ಪ್ರಸ್ತಾಪ ಮಾಡಿದ್ದೇವೆ. ಗಡಿ ಭಾಗದಲ್ಲಿ ಆಗತಕ್ಕಂಥ ಅಧಿವೇಶನಕ್ಕೆ ಯಾವುದೇ ಕಾರ್ಯಸೂಚಿಯೇ ಇಲ್ಲ. ಅಂದರೆ, ಯಾವ ವಿಷಯದ ಮೇಲೆ ಇಲ್ಲಿ ಚರ್ಚೆ ಆಗಬೇಕೆಂದು ಮಾಹಿತಿ ಕೂಡ ಕೊಟ್ಟಿಲ್ಲ. ಆದ್ದರಿಂದ ನಾವು ಹೇಳತಕ್ಕಂಥದ್ದೇನೆಂದರೆ ಗಡಿಭಾಗದಲ್ಲಿ ಆಗತಕ್ಕಂಥ ಅಧಿವೇಶನ ಬಹಳ ಅರ್ಥಪೂರ್ಣವಾದ ಅಧಿವೇಶನ ಆಗಬೇಕು. ಇವತ್ತು ಮಾನ್ಯ ಗೃಹ ಸಚಿವರು ಯಾವ ರೂಲ್ಸ್ ಮೇಲೆ ಇದೆ ಎಂದು ಹೇಳುತ್ತಾರೆ. ಮಹಾಜನ್ ವರದಿ ಅಂತಿಮ ವರದಿಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಗಡಿಯ ಭಾಗದಲ್ಲಿ ಆಗತಕ್ಕಂತಹ ಅಧಿವೇಶನದಲ್ಲಿ ಪಾಸು ಮಾಡಿ ಕಳುಹಿಸಿದರೆ ಅದಕ್ಕೊಂದು ಅರ್ಥ ಬರುತ್ತದೆ. ಇವತ್ತು ಎಲ್ಲಾ ರೂಲ್ಸ್ ಸಸ್ಪೆಂಡ್ ಮಾಡಿ ಇದನ್ನು ಕೈಗೆತ್ತಿಕೊಳ್ಳಿರಿ. ಇವತ್ತು ನೀವು pristageಗೆ ನಿಲ್ಲಬೇಡಿ. ಯಾರು ಮಾಡುತ್ತಾರೆ, ಯಾರು ಬಿಡುತ್ತಾರೆ ಎಂದು ಅಲ್ಲ. ಇವತ್ತು ಇಡೀ ನಮ್ಮ ಸದನದಲ್ಲಿ ನಿರ್ಣಯವಾಗಬೇಕು. ಇವತ್ತು ಕೇಂದ್ರ ಸರ್ಕಾರಕ್ಕೆ ಬೇರೆ ರಾಜ್ಯಗಳಿಗೆ ಕೂಡ ಇವತ್ತು ನಡೆಯತಕ್ಕಂಥ ಸಂದರ್ಭದಲ್ಲಿ ಐಸಿಹಾಸಿಕ ವಾದಂತಹ ನಿರ್ಣಯ ತಮ್ಮ ಅಧ್ಯಕ್ಷತೆಯಲ್ಲಿ ಆಗಿದೆ ಎನ್ನುವಂತಹ ಮಾತನ್ನು ಕೂಡ ಬರಬೇಕು, ಆ ರೀತಿಯಾಗಿ ನಾವು ಇವತ್ತು ನಾವು ನಿರ್ಣಯವನ್ನು ಮಂಡನೆ ಮಾಡಿದ್ದೇವೆ. ಅದಕ್ಕೆ ಅವರು ಒಪ್ಪಿಬಿಡುತ್ತಾರೆ. ಅದಾದ ನಂತರ ಊಟಕ್ಕೆ ಹೋಗೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ(ಉಪಮುಖ್ಯಮಂತ್ರಿಗಳು):ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಮಾನ್ಯ ರಾಯರೆಡ್ಡಿ ಯವರೆ, ದಯಮಾಡಿ ಒಂದು ನಿಮಿಷ, ಪ್ಲೀಸ್ ಸಾರ್.

ಶ್ರೀ ಬಸವರಾಜ ರಾಯರೆಡ್ಡಿ: ದಯಮಾಡಿ ಒಂದು ನಿಮಿಷ.

** ಈ ಪದಗಳನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾರ್ ನಾನು ನಿಂತಿದ್ದೇನೆ. ನಮ್ಮ ಪ್ರತಿಪಕ್ಷದ ನಾಯಕರು ಬಹಳ ಚಿಂತನೆಯನ್ನು ಮಾಡಿ ಮಹಾಜನ್ ಆಯೋಗದ ವರದಿ ಜಾರಿಗೆ ಬರಬೇಕು. ಅದರ ಬಗ್ಗೆ ಸರ್ವಸಮ್ಮತವಾದ ನಿರ್ಣಯ ಇವತ್ತೇ ಆಗಬೇಕು. ಮಹಾರಾಷ್ಟ್ರದಲ್ಲೂ ಸಹ ಇದನ್ನು ಕೆದಕುವಂತಹ, ಕೆಣಕುವಂತಹ ಇದರ ವಿರುದ್ಧ ಮಾತನಾಡುವಂತಹದ್ದು ಪ್ರಾರಂಭವಾಗಿದೆ ಎಂಬುವುದರ ಬಗ್ಗೆ ಸಲಹೆಯನ್ನು ಕೊಟ್ಟಿರುವುದಕ್ಕೆ ನಾನು ಸರ್ಕಾರದ ಪರವಾಗಿ ಸ್ವಾಗತ ಮಾಡುತ್ತೇನೆ. ನಮ್ಮ ಸಲಹೆ ಏನೆಂದರೆ ಈ ನಿರ್ಣಯದ ಬಗ್ಗೆ ಬೆಳಗಾವಿಯಲ್ಲಿ ಬಹಳ ವರ್ಷಗಳಿಂದ ಬೇಡಿಕೆ ಇದ್ದಂಥ ಒಂದು ವಿಧಾನಮಂಡಲದ ಅಧಿವೇಶನ ಈಗ ಪ್ರಾರಂಭವಾಗಿದೆ. ಇದೊಂದು ಐಸಿಹಾಸಿಕವಾದಂತಹ ನಿರ್ಣಯವನ್ನು ನಾವು ಮಾಡಿದ್ದೇವೆ. ಆ political willನ್ನು ನಾವು ಇಟ್ಟುಕೊಂಡು ನಮ್ಮ ಈ ಸಮ್ಮಿಶ್ರ ಸರ್ಕಾರ ಇದನ್ನು ಮಾಡುತ್ತಿದೆ. ಹಿಂದೆ ಇದು ಆಗಲಿಲ್ಲ, ಈ ಭೂಮಿಯಲ್ಲಿ, ಈ ನೆಲದಲ್ಲಿ, ಮಹಾಜನ್ ಆಯೋಗದ ವರದಿ ಅದಕ್ಕೆ ನಾವು ಸಂಪೂರ್ಣವಾಗಿ ಅದನ್ನು ಜಾರಿಗೆ ತರಬೇಕೆಂದು ಒಪ್ಪಿಕೊಂಡಿದ್ದೇವೆ. ಇದು ಜಾರಿಯಲ್ಲಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಯಾವುದೋ ಒಂದು ರಾಜಕೀಯ ಕಾರಣಕ್ಕಾಗಿ ಮಹಾರಾಷ್ಟ್ರದವರು ಕೆಣಕಿ, ಕೆಣಕಿ ಗೊಂದಲವನ್ನುಂಟು ಮಾಡಬಹುದು. ನಿರ್ಣಯವನ್ನು ಮಾಡೋಣ, ಸನ್ಮಾನ್ಯ ವಿರೋಧ ಪಕ್ಷದವರು appreciate ಮಾಡಬೇಕಾಗಿತ್ತು. ಸರ್ಕಾರವೇ, ನಮ್ಮ ನಾಯಕರೇ ಇದನ್ನು ಮಂಡನೆ ಮಾಡುತ್ತಾರೆ. ನಾವು ನಿರ್ಣಯವನ್ನು ಮಂಡನೆ ಮಾಡುತ್ತೇವೆ. ಸರ್ಕಾರದ ಕಡೆಯಿಂದಲೇ ನಿರ್ಣಯವನ್ನು ಮಂಡನೆ ಮಾಡುತ್ತೇವೆ. ಕಳಸಾ ಬಂಡೂರಿ ನಾಲಾ ಬಗ್ಗೆಯೂ ಕೂಡ ನಿರ್ಣಯ ಮಂಡನೆ ಮಾಡುತ್ತೇವೆ

ಕನ್ನಡ ಶಾಸ್ತ್ರೀಯ ಭಾಷೆಯಾಗಬೇಕೆಂದು ನಿರ್ಣಯ ಮಾಡುತ್ತೇವೆ. ಇದನ್ನು ಕೇಂದ್ರ ಸರ್ಕಾರದವರು ತತ್‌ಕ್ಷಣ ಒಪ್ಪಿಕೊಳ್ಳಬೇಕೆಂದು ಅದರ ಬಗ್ಗೆಯೂ ಕೂಡ ಬೆಳಗಾವಿಯಲ್ಲಿ ಆ ನಿರ್ಣಯವನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳುತ್ತೇವೆ ಇದರ ಬಗ್ಗೆ ಅಂತಿಮವಾದಂತಹ ತೀರ್ಮಾನವಾಗಬೇಕು. ಸಭಾನಾಯಕರೇ ಈ ನಿರ್ಣಯವನ್ನು ಮಂಡಿಸುತ್ತಾರೆ. ಕನ್ನಡ ಶಾಸ್ತ್ರೀಯ ಭಾಷೆಯಾಗಬೇಕೆಂಬುದರ ಬಗ್ಗೆ ನಿರ್ಣಯವನ್ನು ಮಾಡೋಣ. ಮಹಾಜನ್ ಆಯೋಗದ ವರದಿಯು ಜಾರಿಗೆ ಬರಬೇಕೆಂಬುದರ ಬಗ್ಗೆ ನಿರ್ಣಯ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. Business advisory committee ಯಲ್ಲಿ

ವಾಟಾಳ್ ನಾಗರಾಜ್‌ರವರು ಎಲ್ಲಾ ತೀರ್ಮಾನ ಮಾಡಿ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಇವತ್ತೇ ಬೇಕಾದರೆ ನಿರ್ಣಯ ಮಂಡನೆ ಮಾಡುವುದಕ್ಕೆ ಸರ್ಕಾರ ಸಿದ್ದವಿದೆ. ಈ ಸರ್ಕಾರವು ಒಕ್ಕೊರಲಿನಿಂದ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಸಿದ್ದವಿದೆ. ಕನ್ನಡ ಶಾಸ್ತ್ರೀಯ ಭಾಷೆಯಾಗಬೇಕೆನ್ನುವುದರ ಬಗ್ಗೆಯೂ ಕೂಡ ನಾವು ಸಿದ್ದರಿದ್ದೇವೆ. ಕಳಸಾಬಂಡೂರಿ ನಾಲಾ ಕೂಡ ಅದು ಪ್ರಾರಂಭವಾಗಬೇಕು ಅದರ ಬಗ್ಗೆ ಚರ್ಚೆಯಲ್ಲಿ ತೀರ್ಮಾನವಾಗಬೇಕು. ಅದೇ ರೀತಿಯಲ್ಲಿ ಮಹಾಜನ್ ವರದಿಯೂ ಅಂತಿಮ ಎನ್ನುವುದರ ಬಗ್ಗೆಯೂ ಕೂಡ ಸಭಾನಾಯಕರು ಇವತ್ತೇ ಮಂಡನೆ ಮಾಡುತ್ತಾರೆ. ಅದರ ಬಗ್ಗೆ ಬಿಎಸಿಯಲ್ಲಿ ತೀರ್ಮಾನ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಈಗ ದಯಮಾಡಿ.....

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ನಾವು ಸಮಗ್ರ ಕರ್ನಾಟಕದ ಬಗ್ಗೆ, 5 ಕೋಟಿ ಕನ್ನಡಿಗರ ಬಗ್ಗೆ, ಗಡಿನಾಡಿನ ಬಗ್ಗೆ, ಹೊರನಾಡಿನ ಕನ್ನಡಿಗರ ಬಗ್ಗೆ, ಮಹಾಜನ್ ವರದಿಯ ಬಗ್ಗೆ, ಕೇಂದ್ರ ಕರ್ನಾಟಕಕ್ಕೆ ಮಾಡಿರತಕ್ಕಂಥ ಎಲ್ಲಾ ಅನ್ಯಾಯಗಳ ಬಗ್ಗೆ, ಇಲ್ಲಿ ನಿರಂತರವಾಗಿ ಸರ್ವಾನುಮತದ ನಿರ್ಣಯ ಮಾಡತಕ್ಕಂಥದ್ದೇ ಈ ಗಡಿನಾಡಿನಲ್ಲಿ ನಡೆಯುತ್ತಿರತಕ್ಕಂಥ ಶಾಸನಸಭೆಯ ಉದ್ದೇಶ. ಅದರ ಬಗ್ಗೆ ಬೇರೆ ಮಾತು ಇಲ್ಲವೇ ಇಲ್ಲ. ಅದರ ಬಗ್ಗೆ ಮಾತನಾಡಬೇಕಾಗುತ್ತದೆ. ಆ ನಿರ್ಣಯ ಆಗಲೇಬೇಕು. ಏಕೆ ಇಲ್ಲಿ ನಾವು ಈ ಸಭೆಯನ್ನು ನಡೆಸುತ್ತಿದ್ದೇವೆ; ಯಾವ ಉದ್ದೇಶಕ್ಕಾಗಿ ನಡೆಸುತ್ತಿದ್ದೇವೆ? ಕನ್ನಡಿಗರ ಆಶೋತ್ತರಗಳು, ಉತ್ತರ ಕರ್ನಾಟಕದ ಜನರ ಆಶೋತ್ತರಗಳು, ಹೈದರಾಬಾದ್ ಕರ್ನಾಟಕದ ಜನರ ಆಶೋತ್ತರಗಳು, ಸಮಗ್ರ ಕರ್ನಾಟಕದ ಜನರ ಆಶೋತ್ತರಗಳು, ಕರ್ನಾಟಕ ಏಕೀಕರಣವಾಗಿ 50 ವರ್ಷವಾಗಿದೆ. ಇದುವರೆಗೂ ಏನೂ ಆಗಿಲ್ಲದಿರುವುದರ ಬಗ್ಗೆ ನಾವು ಏನು ಮಾಡುತ್ತೇವೆ ಎನ್ನತಕ್ಕಂಥದ್ದರ ಬಗ್ಗೆ ಈ ಸದನ ಶಕ್ತಿಯುತವಾಗಿ ನಿರ್ಣಯ ಮಾಡಬೇಕಾಗಿದೆ. ನಾನು ಈ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ, ನಾವು ಹಕ್ಕುಚ್ಯುತಿ ನಿರ್ಣಯವನ್ನು ಬಹಳ ಬೇಗನೆ ಕೊಡಬೇಕೆಂದು ನಾನು ಮತ್ತು ಮಾಧುಸ್ವಾಮಿಯವರು ಅಂದುಕೊಂಡರೂ, ನೀವು ಎಲ್ಲಿದ್ದೀರಿ ಎಂದು ಹುಡುಕುವುದೇ ಒಂದು ದೊಡ್ಡ ಕೆಲಸವಾಯಿತು. ನಿಮ್ಮ ಕಾರ್ಯಾಲಯ ಎಲ್ಲಿದೆ, ನೀವು ಎಲ್ಲಿ ಉಳಿದುಕೊಂಡಿದ್ದೀರಿ ಎನ್ನುವುದು ಯಾವುದೂ ನಮಗೆ ಗೊತ್ತೇ ಆಗಲಿಲ್ಲ. ಅಧ್ಯಕ್ಷರು ಎಲ್ಲಿದ್ದಾರೆ ಎನ್ನುವುದು ನಮಗೆ ಗೊತ್ತೇ ಆಗಲಿಲ್ಲ; ಹೊರಟ್ಟಿಯವರೇ, ನಾನು ಹೇಳುವುದನ್ನು

ದಯವಿಟ್ಟು ಸ್ವಲ್ಪ ಕೇಳಿ, ಸುಮ್ಮನೆ ಹೀಗೆ ಮಾತನಾಡುವುದು ಬೇಡ. ತಾವು ವಿದೇಶದಲ್ಲಿದ್ದರು; ಹೊಸದಾಗಿ ಅಧಿವೇಶನ ಕರೆದಿದ್ದಾರೆ, ನಾವು ಎಲ್ಲಿ ಇರಬೇಕು, ನೀವು ಎಲ್ಲಿ ಇರಬೇಕು, ನಿಮ್ಮ ಕಾರ್ಯಾಲಯವೆಲ್ಲಿ, ನಾವು noticeಗಳನ್ನು ಯಾರಿಗೆ ಕೊಡಬೇಕು, ಇವು ನಮಗೆ ತಬ್ಬಿಬ್ಬಾದ ವಿಷಯಗಳಾದವು.

ಶ್ರೀ ಬಿ.ಎಸ್.ಯಡಿಯೂರಪ್ಪ: ವಾಟಾಳ್ ನಾಗರಾಜ್‌ರವರೇ, ಇಷ್ಟೊಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಬೇಕು, ಅದನ್ನು ಬಿಟ್ಟು ಇದರ ಬಗ್ಗೆ ಟೀಕೆ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಸದನ ನಡೆಯಬೇಕೆಂದು ಹೇಳಿದವನೇ ನಾನು. ನಂತರ ಪಾಟೀಲ ಪುಟ್ಟಪ್ಪನವರೂ ಹೇಳಿದ್ದಾರೆ, ನಾನು ಕನ್ನಡ ಗಡಿನಾಡಿನ ಅಭಿವೃದ್ಧಿ ಆಯೋಗದ ಅಧ್ಯಕ್ಷನಾಗಿದ್ದಾಗಲೂ ಹೇಳಿದ್ದೆ. ಇಡೀ ರಾಜ್ಯದ ಜನತೆ ಇಲ್ಲಿ ಸಭೆ ನಡೆಯಬೇಕೆಂದು ಹೇಳಿದ್ದಾರೆ. ನೀವು ಮಾಡಿದ್ದೀರಿ, ಅದಕ್ಕೆ ನಮ್ಮದೇನೂ ತಕರಾರಿಲ್ಲ. ಆದರೆ, ಈಗ ನಾನು ಹೇಳುತ್ತಿರುವುದು ಸ್ವಲ್ಪ ತಾಂತ್ರಿಕವಾದಂಥ ವಿಚಾರ. ಏಕೆ, ಏನು, ಎಲ್ಲಿ ಎನ್ನತಕ್ಕಂಥಾದ್ದರ ಬಗ್ಗೆ ನಮ್ಮನ್ನೆಲ್ಲಾ ಕತ್ತಲೆಯಲ್ಲಿ ಇಟ್ಟಿದ್ದೀರಿ ಎನ್ನುವ ವಿಚಾರವನ್ನು ಬಿಟ್ಟರೆ ಬೇರೆ ವಿಚಾರಗಳ ಬಗ್ಗೆ ನಾವು ಮಾತನಾಡೋಣ. ನಿಜವಾಗಲೂ ಹೇಳುತ್ತೇನೆ, ತಮ್ಮ ಕಾರ್ಯಾಲಯ ಎಲ್ಲಿದೆ ಎನ್ನುವುದು ನಮಗೆ ಪ್ರಾಮಾಣಿಕವಾಗಿಯೂ ಗೊತ್ತಾಗಲಿಲ್ಲ. ಅದರ ಬಗ್ಗೆ ಬೇರೆ ಮಾತಿಲ್ಲ. ಅದೆಲ್ಲೋ ಹೋಗಿದ್ದಾರೆ ಎಂದು ಹೇಳಿದರು, ಎಲ್ಲಿದ್ದಾರೆ ಎಂಬುದು ನಮಗೆ ಗೊತ್ತಾಗಲಿಲ್ಲ, ಎಲ್ಲೋ ಮೆರವಣಿಗೆ ಎಂದರು, ಎಲ್ಲಿ ಹೋದರು ಎಂಬುದು ಗೊತ್ತಾಗಲಿಲ್ಲ. ಈ ಎಲ್ಲಾ ತಕರಾರಿನಿಂದ ನಾವು ಹಕ್ಕುಚ್ಯುತಿ ಸೂಚನೆಯನ್ನು ಕೊಡುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬಹುದು. ಅದಕ್ಕಾಗಿ, ತಾವು ದಯವಿಟ್ಟು ಹಕ್ಕುಚ್ಯುತಿ ಸೂಚನೆಯನ್ನು ಮೊದಲು ತೆಗೆದುಕೊಳ್ಳಬೇಕೆಂದು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಕನ್ನಡದ ವಿಚಾರದಲ್ಲಿ ನಾವು ಒಂದು ಇಂಚೂ ಹಿಂದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ support ಇದೆ ಎಂದು ಹೇಳಿದ ಮೇಲೆಯೇ ನಾವು ಹೇಳುತ್ತಿರುವುದು.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು): ಇವತ್ತು ಬೆಳಗಾವಿಯಲ್ಲಿ ಕರೆದಿರುವಂಥ ಈ ಅಧಿವೇಶನಕ್ಕೆ ಮಹತ್ವ ಬರಬೇಕಾದರೆ,

ನಾನು ಕೈ ಮುಗಿದು ಹೇಳುತ್ತೇನೆ, ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಬೇಡಿ; ರಾಜಕೀಯ ಬೆರೆಸಬೇಡಿ, ಇಡೀ ಕರ್ನಾಟಕ ರಾಜ್ಯದ ಜನರು ನಮ್ಮನ್ನು ನೋಡುತ್ತಿದ್ದಾರೆ. ಬೆಂಗಳೂರಿನಲ್ಲಿ ಮಾಡಿದಂಥ ರಾಜಕಾರಣವನ್ನು ಮತ್ತೆ ಇಲ್ಲಿ ಮಾಡಬೇಡಿ. ಇಡೀ ಕರ್ನಾಟಕ ರಾಜ್ಯ ಒಂದೇ ಎಂದು..

ಶ್ರೀ ಬಸವರಾಜ ರಾಯರೆಡ್ಡಿ: ನಾವಲ್ಲ, ರಾಜಕಾರಣ ಮಾಡುತ್ತಿರುವುದು ನೀವು.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ಅಧ್ಯಕ್ಷರೇ, ದಯವಿಟ್ಟು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇಡೀ ಕರ್ನಾಟಕ ರಾಜ್ಯದ ಜನ ನೋಡುತ್ತಿದ್ದಾರೆ, ಹೊರಗಡೆ ಜನರು ನೋಡುತ್ತಿದ್ದಾರೆ.....

ಶ್ರೀ ಕೆ.ಎಸ್. ಈಶ್ವರಪ್ಪ: ಇದಕ್ಕೆ ಯಾವುದೇ ರಾಜಕೀಯ ಕೊಡದೇ, ನೇರವಾಗಿ ನಾವೆಲ್ಲಾ ಒಂದಾಗಿದ್ದೇವೆ ಎನ್ನುವ ಭಾವನೆ ಮೂಡಿದರೆ ಮಾತ್ರ ಕರ್ನಾಟಕ ರಾಜ್ಯದ ಜನತೆಗೆ ಒಳ್ಳೆಯದಾಗುತ್ತದೆ. ಕರ್ನಾಟಕ ರಾಜ್ಯದ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ದಯವಿಟ್ಟು ತಾವೆಲ್ಲರೂ ಅಧಿವೇಶನದ ಪಾವಿತ್ರ್ಯತೆಯನ್ನು ಅರ್ಥಮಾಡಿಕೊಳ್ಳಿ. ಕರ್ನಾಟಕ ರಾಜ್ಯ ಪ್ರತ್ಯೇಕವಾಗಿಲ್ಲವೆಂದು ತೋರಿಸಿ. ದಯವಿಟ್ಟು ರಾಜಕಾರಣ ಮಾಡಬೇಡಿ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೇ, ಬೆಳಗಾವಿ ಭಾಗದವರಿಗೆ ಮಾತನಾಡಲು ಅವಕಾಶ ಕೊಡಿ. ನೀವು ಬರೀ ಮುಂದೆ ನೋಡುತ್ತೀರಿ, ಹಿಂದೆ ಇರುವ ನಮ್ಮನ್ನು ನೋಡುವುದಿಲ್ಲ.

ಅಧ್ಯಕ್ಷರು: ಸುಮ್ಮನೇ ಮಾತನಾಡಿ ಕಾಲಹರಣ ಮಾಡಿದರೆ ಏನೂ ಪ್ರಯೋಜನವಿಲ್ಲ. ನನ್ನ ಮಾತನ್ನು ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ತಾವು ನಮ್ಮ ಮಾತನ್ನೂ ಕೇಳಿ.

ಅಧ್ಯಕ್ಷರು: ಏನು ಕೇಳುವುದು? ನಿಮಗೆ ಮಾತನಾಡಲು ಅವಕಾಶ ಕೊಟ್ಟರುವೆನೇನು? ಸುಮ್ಮನೆ ಏನಿದು? ಮೊದಲು ದಯಮಾಡಿ ಕುಳಿತುಕೊಳ್ಳಿ. ನಾನು ನಿಮಗೆ ಅವಕಾಶವನ್ನು ಕೊಟ್ಟಲ್ಲ. ಕುಳಿತುಕೊಳ್ಳಿ. ನಾನು ನಿಮಗೆ ಅನಂತರ ಅವಕಾಶವನ್ನು ಕೊಡುತ್ತೇನೆ, ಈಗ ಕುಳಿತುಕೊಳ್ಳಿ.

(ಈ ಹಂತದಲ್ಲಿ ಶ್ರೀ ಬಿ.ಎಸ್.ಹೊರಟ್ಟಿ ಹಾಗೂ ಶ್ರೀ ಕೆ.ಎಸ್.ಈಶ್ವರಪ್ಪ ನವರು ಮಾತನಾಡಲು ಪ್ರಯತ್ನಪಟ್ಟರು)

ಅಧ್ಯಕ್ಷರು: ಹೊರಟ್ಟಿಯವರೇ, ಈಶ್ವರಪ್ಪನವರೇ, ದಯಮಾಡಿ ಕುಳಿತು ಕೊಳ್ಳಿ. ದಯಮಾಡಿ ಎಲ್ಲರೂ ಕೇಳಿ. ಈ ಬೆಳಗಾವಿ ನಗರದಲ್ಲಿ ಅಧಿವೇಶನ ವನ್ನು ನಡೆಸಬೇಕೆಂದು, ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್ ರವರೇ

ಹಿಂದೆ ಪ್ರಯತ್ನ ಪಟ್ಟಿದ್ದರು, ಅದಕ್ಕಾಗಿ ಅವರೂ ಅಭಿನಂದನಾರ್ಹರು, ಈ ಸರ್ಕಾರ ತೀರ್ಮಾನ ಮಾಡಿದೆ, ಇವರೂ ಅಭಿನಂದನಾರ್ಹರು. ಆದರೆ ಈ ವಿಚಾರದಲ್ಲಿ ಸುಮ್ಮನೆ ಮುಂದುವರೆಸುವುದು ಬೇಡ, ದಯಮಾಡಿ ಎಲ್ಲರೂ ಒಗ್ಗಟ್ಟಾಗಿ, ಗಡಿಯ ಪ್ರಶ್ನೆಯಾಗಬಹುದು, ನಾಡಿನ ಅಭಿವೃದ್ಧಿಯ ಪ್ರಶ್ನೆಯಾಗ ಬಹುದು, ಅವುಗಳ ಬಗ್ಗೆ ಈ 5 ದಿನಗಳ ಕಾಲ ಸಮಾಧಾನಕರವಾಗಿ ಚರ್ಚೆ ಯನ್ನು ಮಾಡೋಣ. ಯಾವ ರೀತಿಯಲ್ಲಿ ಅದನ್ನು ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡೋಣ. ನಿಮ್ಮ ಹಕ್ಕುಚ್ಯುತಿ ಸೂಚನೆಯನ್ನು ಇತ್ತೀಚೆಗೆ ಕೊಟ್ಟಿದ್ದೀರಿ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಆದ್ದರಿಂದ ಎಲ್ಲರೂ ದಯಮಾಡಿ ಸಹಕರಿಸಿ, ಇದನ್ನು ಮುಂದು ವರೆಸಿಕೊಂಡು ಹೋಗುವುದು ಬೇಡ.

ಶ್ರೀ ಬಸವರಾಜ ರಾಯರೆಡ್ಡಿ: ನಮಗೆ ಮಾತನಾಡಲು ಅವಕಾಶ ಕೊಡಿ, ನಾವು ಹೇಳುವುದನ್ನು ದಯಮಾಡಿ ಕೇಳಿ.

ಅಧ್ಯಕ್ಷರು: ನೀವು ಹೇಳುವುದನ್ನು ಕೇಳುತ್ತೇನೆ. ಈಗಾಗಲೇ 2 ಗಂಟೆ 50 ನಿಮಿಷಗಳಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ: ದಯಮಾಡಿ ಒಂದು ನಿಮಿಷ ಮಾತ ನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು, ಒಂದು ನಿಮಿಷದಲ್ಲಿ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಬೆಳಗಾವಿಯಲ್ಲಿ ಅಧಿವೇಶನ ಕರೆ ಯುವುದರ ಬಗ್ಗೆ ನಾವೆಲ್ಲರೂ ಸ್ವಾಗತ ಮಾಡಿದ್ದೇವೆ, ಕಾಂಗ್ರೆಸ್ ಪಕ್ಷ ಕೂಡ ಸ್ವಾಗತ ಮಾಡಿದೆ. ತಮಗೆ ಗೊತ್ತಿದೆ ಅಧ್ಯಕ್ಷರೇ.....

ಅಧ್ಯಕ್ಷರು: ಅದಕ್ಕೆ ಎಲ್ಲರೂ ಅಭಿನಂದನಾರ್ಹರು ಎಂದು ನಾನು ಹೇಳಿದ್ದೇನಲ್ಲಾ ಇದರಲ್ಲಿ ಎಲ್ಲರ ಪಾತ್ರವೂ ಇದೆ, ಎಲ್ಲರೂ ಅಭಿನಂದನಾರ್ಹರು, ಆದರೆ ಸಣ್ಣದ್ದನ್ನು ದೊಡ್ಡದು ಮಾಡದೆ.....

ಶ್ರೀ ಬಸವರಾಜ ರಾಯರೆಡ್ಡಿ: ದಯಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಧರಂಸಿಂಗ್ ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭ ದಲ್ಲಿ, ಹೊರಭಾಗದಲ್ಲಿ ವಿಧಾನಸಭಾ ಅಧಿವೇಶನವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದರು, ಅದರ ಪ್ರಕಾರ ನೀವು ಬೋರೇಗೌಡರ ನೇತೃತ್ವದಲ್ಲಿ ಸಮಿತಿಯನ್ನು ನೇಮಕ ಮಾಡಿದಿರಿ. ಅದರನ್ವಯ ಇವತ್ತು ಈ ಸರ್ಕಾರ ಅಧಿವೇಶನ ನಡೆಸುತ್ತಿದೆ. ಇವತ್ತು ನೀವು ಅಧಿವೇಶನವನ್ನು ಕರೆದಿದ್ದೀರಿ. ನಮಗೆ ಬಹಳ ಸಂತೋಷ. ಅದನ್ನು ನಾನು ಪತ್ರದಲ್ಲಿಯೂ ಬರೆದಿದ್ದೇನೆ. ಆದರೆ

ಮಾನ್ಯ ಗೃಹ ಹಾಗೂ ಸಂಸದೀಯ ಸಚಿವರು ಈ ಅಧಿವೇಶನವನ್ನು ಕರೆದಿರುವ ಮುಖ್ಯವಾದ ಉದ್ದೇಶ. ಬೆಳಗಾವಿ ಮತ್ತು ಗಡಿ ಭಾಗದ ಬಗ್ಗೆ ಈಗಾಗಲೇ ಮಹಾಜನ್ ವರದಿ ಅಂತಿಮ ನಿರ್ಣಯವನ್ನು ತೆಗೆದುಕೊಂಡಿದೆ ಅದರ ಬಗ್ಗೆ ಒಂದು resolution ಅನ್ನು ಸರ್ಕಾರವೇ move ಮಾಡಬೇಕಾಗಿತ್ತು. ಸರ್ಕಾರ ಮಾಡುವುದಕ್ಕೆ fail ಆಗಿದ್ದರಿಂದ, ವಿರೋಧ ಪಕ್ಷದ ನಾಯಕರೇ ಇವತ್ತು ಆ ತೀರ್ಮಾನವನ್ನು ಮಾಡಿದರು.

(ಅಡಚಣೆ)

ಶ್ರೀ ಕೆ.ಎಸ್.ಈಶ್ವರಪ್ಪ: ಇವತ್ತು ಎಲ್ಲಿ fail ಆಗಿದೆ?

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವತ್ತಿನ agenda ನೋಡಿ. ಇವತ್ತಿನ agendaದಲ್ಲಿ ಗಡಿನಾಡಿನ ಬಗ್ಗೆಯಾಗಲಿ, ಈ ಒಂದು ಅಧಿವೇಶನ ಕರೆದಿರುವ ಬಗ್ಗೆ ಒಂದು ಮಾತಿಲ್ಲ. ಅದರಲ್ಲಿ ಏನು ಹೇಳಿದ್ದೀರಿ? ಸಂತಾಪ ಸೂಚನೆಗಳು, ಕಾರ್ಯದರ್ಶಿಯವರ ವರದಿ, ಕಾರ್ಯದರ್ಶಿಯವರ ವರದಿ ಏನು? ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಾಧ್ಯಕ್ಷರಿಂದ.., ಮೂರನೆಯದು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು, ಶಾಸನ ರಚನೆ, ಹಾಗೆನ್ನುವುದರಿಂದ ಏನು ಪ್ರಯೋಜನ? ದಯಮಾಡಿ ಅರ್ಥಮಾಡಿಸಿ. ಏನು ಪ್ರಯೋಜನ?

ಅಧ್ಯಕ್ಷರು: ದಯಮಾಡಿ ನಾನು ಆಗಲೇ ಹೇಳಿದ್ದೇನೆ. ಜನರು ಹೊರಗಡೆ ನಿಂತು ನೀವು ಯಾವ ರೀತಿ ಮಾಡುತ್ತಿದ್ದೀರಿ ಎಂಬುದನ್ನು ನೋಡುತ್ತಿದ್ದಾರೆ.

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ: ತಾವು ಎಲ್ಲಾ ನಿಯಮಾವಳಿಗಳನ್ನೂ ಬದಿಗೊತ್ತಿ. ಈ ಸರ್ಕಾರ...

ಅಧ್ಯಕ್ಷರು: ನೀವು ಈ ರೀತಿ ಮಾಡಬೇಡಿ. ಆದ್ದರಿಂದ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ: ಎಲ್ಲಾ ನಿಯಮಾವಳಿಗಳನ್ನೂ ಬದಿಗೊತ್ತಿ ಈ ಸರ್ಕಾರ ಇವತ್ತು ಸದನಕ್ಕೆ ಹಕ್ಕುಚ್ಯುತಿಯನ್ನು ಮಾಡಿದೆ. We are not subordinate to the Government.

6. ಪಿ.ಎಂ

ಅಧ್ಯಕ್ಷರು: ನಾನು ಇನ್ನೊಂದು ಸಲ ನೋಡುತ್ತೇನೆ. ಇದು ಇತ್ತೀಚೆಗೆ ಕೊಟ್ಟಿರುವುದು. ಅದನ್ನು ನೋಡುತ್ತೇನೆ.

Sri Basavaraja RayaReddy: We are subordinate to you. ನಾವು ಸದನಕ್ಕೆ subordinate ಆಗಿದ್ದೇವೆಯೇ ಹೊರತು ಸರ್ಕಾರಕ್ಕೆ ಅಲ್ಲ. ದಯಮಾಡಿ ಇದನ್ನು ಸರ್ಕಾರಿ ಕಾರ್ಯಕ್ರಮ ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ನೋಡಿ ಇದು ಇತ್ತೀಚೆಗೆ ಕೊಟ್ಟಿರುವುದಲ್ಲವೇ? ಇದನ್ನು ಪರಿಶೀಲನೆಯನ್ನು ಮಾಡಬೇಕಲ್ಲಾ.

ಶ್ರೀ ಬಸವರಾಜ ರಾಯರೆಡ್ಡಿ: ಜಿಲ್ಲಾಧಿಕಾರಿಗಳು ಏನು ಪತ್ರ ಬರೆದಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ನಿಮಗೆ ಹಕ್ಕು ಚ್ಯುತಿಯಾಗಿದೆ. ಸದನಕ್ಕೆ ಹಕ್ಕುಚ್ಯುತಿಯಾಗಿದೆ. ಅದರ ಬಗ್ಗೆ ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು: ನೋಡೋಣ. ಹಕ್ಕುಚ್ಯುತಿಯಾಗಿದ್ದರೆ ನೋಡೋಣ. ಪರಿಶೀಲನೆ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ವೈಪಲ್ಯತೆಗಳು, ನ್ಯೂನತೆಗಳ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ದಯವಿಟ್ಟು ಅದಕ್ಕೆ ಅನುಮತಿ ಕೊಡಿ. ಮತ್ತು ವಿರೋಧ ಪಕ್ಷದ ಮುಖಂಡರು ಮಾಡಿರತಕ್ಕಂಥ resolution ಅನ್ನು ತೆಗೆದುಕೊಳ್ಳ ಬೇಕಾಗುತ್ತದೆ.

ಅಧ್ಯಕ್ಷರು: ನಾನು ಎಲ್ಲರ ಅಭಿಪ್ರಾಯ ಕೇಳಿದ್ದೇನೆ. ಇದರ ಬಗ್ಗೆ ಒಟ್ಟಾರೆಯಾಗಿ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ಆದ್ದರಿಂದ ಈಗ ವಿಧಾನ ಪರಿಷತ್ತಿನ ಸಭಾಪತಿಯವರು ತಮಗೆಲ್ಲರನ್ನೂ ಊಟಕ್ಕೆ ಕರೆದಿದ್ದಾರೆ. ಈಗ ನಾಲ್ಕು ಗಂಟೆಗೆ ಈ ಮನೆ ಸೇರುವಂತೆ ಸದನವನ್ನು ಮುಂದೂಡಲಾಗಿದೆ.

(ಸದನವು 2 ಗಂಟೆ 53ನಿಮಿಷಕ್ಕೆ ಮುಂದೂಡಲ್ಪಟ್ಟು ಭೋಜನ ವಿರಾಮದ ನಂತರ ಮತ್ತೆ 4.00ಗಂಟೆಗೆ ಸಮಾವೇತಗೊಳ್ಳಲು ನಿಶ್ಚಯಿಸಿತು.)

(ಸದನವು 6 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಈಗ ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಸಭಾನಾಯಕರು ನಿರ್ಣಯವನ್ನು ಮಂಡಿಸಬೇಕೆಂದು ಕೋರುತ್ತೇನೆ.